ನಗರದಲ್ಲಿ ನಿಷೇಧಾಜ್ಞೆ

ಕರ್ನಾಟಕದ ರಾಜಧಾನಿ ಬೆಂಗಳೂರು. ಎಲ್ಲ ರಾಜಕೀಯ ಪಕ್ಷಗಳ ರಾಜ್ಯಸಮಿತಿ ಕಚೇರಿಗಳು, ಬುದ್ಧಿಜೀವಿಗಳ ವಿಹಾರವಾದ ವಿಶ್ವವಿದ್ಯಾಲಯ ಮತ್ತಿತರ ವಿಜ್ಞಾನ ಕೇಂದ್ರಗಳೂ, ಕನ್ನಡನಾಡಿನ ಮುಖ್ಯ ವಾರ್ತಾಪತ್ರಗಳೂ, ರಾಜ್ಯದ ಉಚ್ಚ ನ್ಯಾಯಾಲಯ ಮತ್ತು ನ್ಯಾಯವಾದಿಗಳ ಸಂಘ ಇತ್ಯಾದಿ ಸಂಘಟನೆಯ ಕೇಂದ್ರವಾಗಿ ಪ್ರಜಾಸತ್ತೆಯ ಉಸಿರಾಗಿರಬೇಕಾಗಿರುವ ನಗರ. ಲಕ್ಷಗಟ್ಟಲೆ ಕಾರ್ಮಿಕರು ಅವರ ಬೇಡಿಕೆಗಳಿಗಾಗಿ ಕೂಗೆಬ್ಬಿಸುವ ನಗರ. ಕರ್ನಾಟಕದ ಮೂಲೆಮೂಲೆಗಳಿಂದ ಬರುವ ರೈತರ ಮತ್ತಿತರ ಜನಸಾಮಾನ್ಯರ ಸಮಸ್ಯೆಗಳು ಪರಿಹಾರವಾಗದಿದ್ದಲ್ಲಿ ವಿಧಾನಸಭೆಯೆದುರು ಧರಣಿ ನಡೆಸಲು ಅವಕಾಶ ಕೊಡುತ್ತಿದ್ದ ನಗರ. ಆದರೆ ಕಳೆದ 5 ತಿಂಗಳಿಂದ ಪೋಲೀಸ್ ಕಾಯಿದೆ ಸೆಕ್ಷನ್ 35ರ ಪ್ರಕಾರ ನಗರದಲ್ಲಿ ನಿಷೇಧಾಜ್ಞೆ ಹಾಕಲಾಗಿದೆ.

ನಗರದ ಜನರ ಬಾಯಿಗೆ ಪೋಲೀಸ್ ಕಮೀಷನರರ ಬೀಗ. ಸಂಘ ಸೇರಲು, ಪ್ರದರ್ಶನ ನಡೆಸಲು, ಸಭೆಗಳನ್ನು ನಡೆಸಲು ಮೂಲಭೂತ

ಸಂಪಾದಕೀಯ

ಹಕ್ಕುಗಳಿವೆಯೆಂದೂ ಮತ್ತು ಈ ಹಕ್ಕುಗಳ ರಕ್ಷಣೆಗಾಗಿ ದೇಶದ ಸರ್ವೋಚ್ಚ ನ್ಯಾಯಾಲಯ ಇರಬೇಕೆಂದೂ ನಮ್ಮ ದೇಶದ ಸಂವಿಧಾನದ ಕಲ್ಪನೆ. ಮೂಲಭೂತ ಹಕ್ಕುಗಳ ರಕ್ಷಣೆ ಕಾರ್ಯಾಂಗದ ಕೈಯಲ್ಲಿ ಸಾಧ್ಯವಿಲ್ಲ ಎಂದು ತಿಳಿದೇ ಸಂವಿಧಾನ ಸಭೆ ಆ ಜವಾಬ್ದಾರಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿದ್ದು.

ನಿಷೇಧಾಜ್ಞೆ ಹೇರಿ. ಎಲ್ಲ ಸಭೆಗಳಿಗೂ ಪೋಲೀಸ್ ಕಮೀಷನರ ಅನುಮತಿ ಪಡೆಯಬೇಕಾದಂಥ ಪರಿಸ್ಥಿತಿಯಲ್ಲಿ ಪೋಲೀಸ್ ಕಮೀಷನರೇ ಮೂಲಭೂತ ಹಕ್ಕುಗಳ ಸರ್ವಾಧಿಕಾರಿ ಆಗಿರುವ ವಿಪರ್ಯಾಸವೇ ಇಂದು ನಗರದಲ್ಲಿ ಕಾಣುವುದು.

ಪ್ರಜಾಸತ್ತೆಯ ಉಸಿರಾಗಿರಬೇಕಾದ ಬೆಂಗಳೂರಿನಲ್ಲಿ ಉಸಿರುಕಟ್ಟುವ ಪರಿಸ್ಥಿತಿ ಉಂಟುಮಾಡಿದ್ದರೂ ಇದನ್ನು ತಡೆಯುವ ಕೈಗಳು ಇನ್ನೂ ಮುಂಬರಲಿಲ್ಲ. ಸಾರ್ವಜನಿಕರಿಂದ ತೀವ್ರ ಪ್ರತಿಭಟನೆ-ಒಂದೇ ಇದಕ್ಕೆ ಪರಿಹಾರ. ○

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 14 | ಏಪ್ರಿಲ್ 5, 1981 | ಬೆಲೆ : 50 ಪೈಸೆ

ಕರಾಳ ಶಾಸನದ ವಿರುದ್ಧ

ಎಲ್. ಐ. ಸಿ. ನೌಕರರ ಅನಿರ್ದಿಷ್ಟಾವಧಿಯ ಮುಷ್ಕರ

ಎಲ್. ಐ. ಸಿ. ಯ 45,000 ಮೂರನೇ ಮತ್ತು ನಾಲ್ಕನೇ ವರ್ಗದ ನೌಕರರು ಏಪ್ರಿಲ್ 2ರಿಂದ ಅನಿರ್ದಿಷ್ಟಾವಧಿಯ ಮುಷ್ಕರವನ್ನು ಆರಂಭಿಸಿದ್ದಾರೆ. ಎಲ್.ಐ.ಸಿ. ನೌಕರರ ಬೋನಸ್ ಮತ್ತು ತುಟ್ಟಿಭತ್ತೆಯನ್ನು ಕಡಿತಗೊಳಿಸುವುದು ಮಾತ್ರವಲ್ಲದೆ, ಕಳೆದ ಹಲವಾರು ದಶಕಗಳ ತ್ಯಾಗ, ಬಲಿದಾನಗಳ ಫಲವಾಗಿ ಕಾರ್ಮಿಕ ವರ್ಗವು ಅನುಭವಿಸಿಕೊಂಡು ಬಂದ ಸಾಮೂಹಿಕ ಚೌಕಾಶಿಯ ಹಕ್ಕನ್ನೇ ಕಿತ್ತುಕೊಳ್ಳುವ ಎಲ್.ಐ.ಸಿ. (ತಿದ್ದುಪಡಿ) ಮಸೂದೆಯ ವಿರುದ್ಧ ಈ ನೌಕರರು ಹೋರಾಟಕ್ಕೆ ಇಳಿದಿದ್ದಾರೆ. ಕಾರ್ಮಿಕರ ಒಗ್ಗಟ್ಟನ್ನು ಮುರಿಯುವ ಏಕಮಾತ್ರ ಉದ್ದೇಶದಿಂದ ಎಲ್.ಐ.ಸಿ. ಯನ್ನು ಐದು ಘಟಕಗಳಾಗಿ ವಿಂಗಡಿಸುವ ಕೇಂದ್ರ ಸರಕಾರದ ತೀರ್ಮಾನವನ್ನೂ ವಿರೋಧಿಸಿ ಈ ಮುಷ್ಕರ ನಡೆಯುತ್ತಿದೆ.

ಕೇಂದ್ರ ಸರಕಾರದಿಂದ ಅಂಗೀಕರಿಸಲ್ಪಟ್ಟ 1974ರ ದ್ವಿಪಕ್ಷೀಯ ಒಪ್ಪಂದವನ್ನು ಇಂದು ಸರಕಾರವೇ ಮುರಿಯುತ್ತಿದೆ. ಒಪ್ಪಂದದ ಪ್ರಕಾರ ಸಲ್ಲತಕ್ಕ ಬೋನಸನ್ನು ಶೇಕಡಾ 12 ಬಡ್ಡಿ ಸಮೇತ ಕೂಡಲೇ ಪಾವತಿ ಮಾಡಬೇಕೆಂದು ಕಳೆದ ನವೆಂಬರ್ 10ರಂದು ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಸರಕಾರವು ಉಲ್ಲಂಘಿಸಿದೆ.

ಇಂದು ಎಲ್.ಐ.ಸಿ. ನೌಕರರು ಕೇವಲ ತಮಗಾಗಿ ಹೋರಾಡುತ್ತಿಲ್ಲ. ದೇಶದ ಸಮಸ್ತ ಕಾರ್ಮಿಕ ವರ್ಗದ ಹಿತಾಸಕ್ತಿಯು ಈ ಹೋರಾಟದಲ್ಲಿ ಅಡಕವಾಗಿದೆ. ದ್ವಿಪಕ್ಷೀಯ ಒಪ್ಪಂದಗಳನ್ನೂ ಸರ್ವೋಚ್ಚ ನಾಯಾಲಯದ ತೀರ್ಪುಗಳನ್ನೂ ಕಾರ್ಮಿಕರ ಸಾಮೂಹಿಕ ಚೌಕಾಶಿಯ ಹಕ್ಕುಗಳನ್ನೂ

(ಕಡೇ ಪುಟ ನೋಡಿ)

ಮಾರ್ಚ್ ೨೬ರ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದಂದು ಭೋರ್ಗರೆದ ಜನಸಾಗರ

ಮಾರ್ಚ್ 26 ರಂದು ದೆಹಲಿ ನಗರ ದೇಶದ ನಾನಾ ಭಾಗಗಳನ್ನು ಪ್ರತಿನಿಧಿಸುತ್ತಿದ್ದ ರೈತರ, ಕೃಷಿಕೂಲಿಕಾರರ ಮತ್ತು ಕಾರ್ಮಿಕರ ಅತೀ ಬೃಹತ್ ರ್‍ಯಾಲಿಯನ್ನು ಕಂಡಿತು. ಬೆಳೆದ ಬೆಳೆಗೆ ಯೋಗ್ಯಬೆಲೆ ನಿಗದಿ, ಸಾರ್ವಜನಿಕ ವಿತರಣಾ ಪದ್ಧತಿಯ ಜಾರಿಗಾಗಿ, ಕನಿಷ್ಠ ಕೂಲಿ ಮತ್ತು ಪರಿಣಾಮಕಾರಿ ಭೂಸುಧಾರಣೆ ಕ್ರಮಗಳಿಗಾಗಿ ಒತ್ತಾಯಿಸಿ ದೆಹಲಿಯ ಬೋಟ್‌ಕ್ಲಬ್‌ನಲ್ಲಿ ಸಮಾವೇಶಗೊಂಡಿದ್ದರು. ಈ ಅಪೂರ್ವ ಐತಿಹಾಸಿಕ ರ್‍ಯಾಲಿಯಲ್ಲಿ ಸುಮಾರು 10 ಲಕ್ಷ ಜನರು ಭಾಗವಹಿಸಿದ್ದರು. ತಮ್ಮ ಧುರೀಣರು ಮಾತನಾಡುವುದನ್ನು ಕೇಳಲು ಕಾತುರದಿಂದಿದ್ದರು.

26ರಂದು ಬೆಳಿಗ್ಗೆ ದೆಹಲಿಯ ಕೆಂಪುಕೋಟೆಯಿಂದ ಪ್ರಾರಂಭವಾಗಿ ಬಹಾದೂರಶಾಹ್ ಜಫರ ಮಾರ್ಗ, ತಿಲಕ್ ಮಾರ್ಗದ ಮೂಲಕ ಬೋಟ್ ಕ್ಲಬ್‌ನ್ನು ತಲುಪಿತು. ಕೆಲವೇ ದಿನಗಳ ಹಿಂದೆ ಕಾಂಗ್ರೆಸ್‌ನ ಕಿಸಾನ್ ರ್‍ಯಾಲಿಯು ಸೋಗಿನಲ್ಲಿ ಲಕ್ಷಾಂತರ ಜನರನ್ನು ಮೇಳಯಿಸಿತ್ತು. ಅಪಾರವಾದ ಅಧಿಕಾರದ ದುರುಪಯೋಗ ತಾಂಡವವಾಡಿತ್ತು. ಶ್ರೀಮತಿ ಗಾಂಧೀ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಆ ಕಿಸಾನ್ ರ್‍ಯಾಲಿಗಾಗಿ ಆಡಳಿತ ಯಂತ್ರವನ್ನೇ ದುರುಪಯೋಗ ಮಾಡಲಾಗಿತ್ತು. ಕೋಟ್ಯಾಂತರ ರೂ. ಹಣವನ್ನು ನೀರಿನಂತೆ ಸುರಿಯಲಾಗಿತ್ತು. ಏಕೆ? ತನಗೂ ಜನಬೆಂಬಲವಿದೆಯೆಂದು ಸಾಬೀತುಗೊಳಿಸಲು ಬಾಡಿಗೆಯ ಜನರ ಪ್ರದರ್ಶನ ಏರ್ಪಡಿಸಲಾಗಿತ್ತು.

ಮಾರ್ಚ್ 26ರಂದು ಕಿಸಾನ ಸಭಾಗಳ ಸಂಯುಕ್ತ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ನಡೆದ ಈ ರ್‍ಯಾಲಿಗೂ ಕಳೆದ ತಿಂಗಳು (16-2-81) ಕಾಂಗ್ರೆ ರ್‍ಯಾಲಿಗೂ ಅಜಗಜಾಂತರ ವ್ಯತ್ಯಾಸ! ದೇಶದ ನಾನಾ ಮೂಲೆಗಳಿಂದ ಆಗಮಿಸಿದ ಈ ಜನಸಾಗರದ ನೇತೃತ್ವವನ್ನು ಕಾಂ. ಹರಕಿಶನ್ ಸಿಂಗ್ ಸುರ್ಜಿತ್. ಕಾಂ. ರಾಜೇಶ್ವರರಾವ್, ಶರದ್‌ಪವಾರ್, ದೇವಿಲಾಲ್, ಚಂದ್ರಜಿತಯಾದವ್, ಗುರುಚರಣಸಿಂಗ್ ತೋಹ್ರಾ, ಚಿತ್ರಬಸು ಕಾಂ. ಬಿ. ಟಿ. ರಣದಿವೆ ಮತ್ತು ಇಂದ್ರಜಿತ್ ಗುಪ್ತಾ, ಚಾತುನ್ನಿ ಮಾಸ್ತರ್ ಮೊದಲಾದವರು ವಹಿಸಿದ್ದರು. 26ರ ಬೆಳಿಗ್ಗೆ ಕೆಂಪುಕೋಟೆ ಮೈದಾನದಿಂದ ಬೋಟ್ ಕ್ಲಬ್‌ನತ್ತ ಚಲಿಸಲು ಆರಂಭವಾಗಿದ್ದರೂ ಮಧ್ಯಾಹ್ನ ಕಳೆದಿದ್ದರೂ ಅಸಂಖ್ಯಾತ ಜನ ತಮ್ಮ ಸರದಿಗಾಗಿ ಕಾಯುತ್ತಿತ್ತು. ಬೇರೆ ಬೇರೆ ಸಂಘಟನೆಗಳ ಬಾವುಟ ಫಲಕಗಳಿಂದ ಮೆರವಣಿಗೆ ಆಕರ್ಷಕವಾಗಿತ್ತು. ಮೊದಲು ಸಾಂಪ್ರದಾಯಿಕ ಸಿಕ್ ವೇಷದಲ್ಲಿ ಅಕಾಲಿದಳದ ಕಾರ್ಯಕರ್ತರು, ಅವರ ಹಿಂದೆ ಕೆಂಪು ಬಾವುಟಗಳ ಮಹಾ ಪ್ರವಾಹ ಹಿಂದೆ ಲೋಕದಳ ಕಾರ್ಯಕರ್ತರ ಹಸಿರು ಬಾವುಟಗಳು ಈ ಕ್ರಮದಲ್ಲಿ ಮೆರವಣಿಗೆ ಸಾಗಿತ್ತು.

ತಮ್ಮ ನ್ಯಾಯಬದ್ಧ ಬೇಡಿಕೆಗಳನ್ನು ಮುಂದಿಟ್ಟು, ಕಾಂಗ್ರೆಸ್‌ನ ಆಡಳಿತ ವೈಖರಿಯಿಂದ ಬಳಲಿ-ಬೆಂಡಾಗಿ, ಆಕ್ರೋಷಗೊಂಡು ರಾಜಧಾನಿಗೆ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಆಗಮಿಸುತ್ತಿದ್ದವರ ಮೇಲೆ ಅಲ್ಲಲ್ಲಿ ಹಲ್ಲೆಗಳು ನಡೆದ ವರದಿಯಾಗಿದೆ. ಸುಮಾರು 14 ವಿವಿಧ ರೈಲು ನಿಲ್ದಾಣಗಳಲ್ಲಿ ಮೆರವಣಿಗೆಕಾರರ ಮೇಲೆ ಕಾಂಗ್ರೆ ಗೂಂಡಾಗಳು ದಾಳಿಮಾಡಿದ್ದಾರೆ. ಮೊಗಲ್‌ಸಾರಾಮರ್‌ನಲ್ಲಿ ಈಗಲೂ ಸಾವಿರಾರು ಜನರು ತಡೆಹಿಡಿಯಲ್ಪಟ್ಟಿದ್ದಾರೆ. ಈ ತೆರದಲ್ಲಿ ಕಾಂಗ್ರೆ ಯಂತ್ರ ಈ ರ್‍ಯಾಲಿಯನ್ನು ಹದಗೆಡಿಸಲು ವಿಶ್ವಪ್ರಯತ್ನವನ್ನೇ ಮಾಡಿದರೂ ಸಫಲವಾಗಲಿಲ್ಲ. ಒಂದು ದಿನ ಮೊದಲೇ ದೂರದಿಂದ ಆಗಮಿಸಿದ ಬೇರೆಬೇರೆ ರಾಜ್ಯಗಳ ರೈತರ ಸಂಗಮ ಒಂದು ಅಪೂರ್ವ ದೃಶ್ಯ. ಬೇರೆಬೇರೆ ಭಾಷೆ, ವೇಷ, ಸಂಪ್ರದಾಯ ಇವೆಲ್ಲ ಭಿನ್ನಭಿನ್ನವಾಗಿದ್ದರೂ ನೆರೆದವರ ಉದ್ದೇಶ-ಭಾವನೆಗಳು ಒಂದೇ ಆಗಿದ್ದವು. ಉಳಿದುಕೊಳ್ಳಲು ಟೆಂಟ್‌ಗಳನ್ನು ವ್ಯವಸ್ಥೆಮಾಡಿದ್ದರೂ ಸಾಲಲಿಲ್ಲದ ಕಾರಣ ನೆಲವನ್ನೇ ಹಾಸಿಗೆಯಾಗಿ ಮಾಡಿಕೊಂಡು ಸಹಸ್ರಾರು ಜನ ದಿನಕಳೆದರು. ಯಾರೂ ಅಸಂತೃಪ್ತರಾಗಲಿಲ್ಲ. ಅದೇ ಕಾಂಗ್ರೆ ರ್‍ಯಾಲಿಯಲ್ಲಿ ? ಹೊಟ್ಟೆಗೆ ಊಟ ಕೊಡದ ಕಾರಣ ತಮ್ಮನ್ನು ಹಣ ಕೊಟ್ಟು ಕರೆತಂದವರ ಮೇಲೆಯೇ ಎರಗಿದ್ದರು. ದೆಹಲಿಗೆ ಕರೆತಂದಾದ ಮೇಲೆ ಕಾಂಗ್ರೆ ನೇತಾಗಳ ತೀಟೆ ತೀರಿದ ಕಾರಣ ಅಮಾಯಕ ಜನ ಕಂಗಾಲಾಗಿದ್ದರು. ಆದರೆ ಇಂದು ಆ ಭಾವನೆಗಳಿಗೆ ಎಡೆಯೇ ಇಸಲಿಲ್ಲ. ಏಕೆಂದರೆ ಇವರು ಹಣಕೊಟ್ಟು ಕರೆತಂದವರಾಗಿರಲಿಲ್ಲ. ತಮ್ಮ ಊಟ-ತಿಂಡಿಗಳನ್ನು ಜೊತೆಯಲ್ಲೇ ತಂದಿದ್ದು ಅತ್ಯಂತ ಶಿಸ್ತುಬದ್ಧರಾಗಿ ತಮ್ಮ ನಾಯಕರ ಆದೇಶದಂತೆಯೇ ನಡೆದರು.

[ಕಡೇ ಪುಟ ನೋಡಿ]

ಸಂಕ್ಷಿಪ್ತ ಸಮಾಚಾರಗಳು

ಬಿಣಗಾ :

ಕಾರವಾರ ಜಿಲ್ಲೆಯ ಬಿಣಗಾ ಕಾಸ್ಟಿಕ್ ಸೋಡಾ ಯೂನಿಯನ್‌ನ ವಾರ್ಷಿಕ ಮಹಾಸಭೆಯು 14-3-81 ರಂದು ನಡೆಯಿತು. ಕಾಂ. ಕೃಷ್ಣಪ್ಪ ಸ್ವಾಗತಿಸಿದರು. ಕಾಂ. ಎಸ್. ಎನ್. ನಾಯಕ್ ಮಾತನಾಡುತ್ತಾ, ಫೆಬ್ರವರಿ 27ರಂದು ದಾಂಡೇಲಿಯಲ್ಲಿ ಕಾಂಗ್ರೆಸ್ ಗೂಂಡಾಗಳು ಕಾರ್ಮಿಕ ಮುಖಂಡ ಕಾಂ. ಆರ್. ಜಿ. ಸ್ಥಳೇಕರರ ಮೇಲೆ ಮಾಡಿದ ಹಲ್ಲೆಯನ್ನು ಉಗ್ರವಾಗಿ ಖಂಡಿಸಿದರು. ನಂತರ ಕಾಂ. ಗಾಂವಕರ, ಎಸ್. ರಾಣೆ, ಕಾಂ. ಹರಿಕಾಂತ ಮತ್ತು ಕಾಂ. ಎನ್. ಜಿ. ನಾಯಕ್ ಮೊದಲಾದವರು ಮಾತನಾಡಿದರು. ನಂತರ ಕಾಂ. ಆರ್. ಜಿ. ಸ್ಥಳೇಕರ ಅಧ್ಯಕ್ಷರಾಗಿ, ಉಪಾಧ್ಯಕ್ಷರುಗಳಾಗಿ ಪಿ. ಪಿ. ಗಾಂವಕರ ಮತ್ತು ಹರಿಕಾಂತ, ಪ್ರಧಾನಕಾರ್ಯದರ್ಶಿಯಾಗಿ ಕಾಂ. ಕೆ. ಎಸ್. ಕೃಷ್ಣಪ್ಪ ಇವರುಗಳುಳ್ಳ ಹಿಂದಿನ ಪದಾಧಿಕಾರಿಗಳನ್ನೇ ಮತ್ತೆ ಸರ್ವಾನುಮತದಿಂದ ಚುನಾಯಿಸಲಾಯಿತು.

ದಿವಂಗತ ಕಾಂ. ಜಿ. ಎ. ಪವಾರರ ಕುಟುಂಬಕ್ಕೆ ಸಲ್ಲಿಸುವ ಪರಿಹಾರ ನಿಧಿಗಾಗಿ ಧನಸಹಾಯ ಕೋರಲಾಯಿತು.

ಕುಣಿಗಲ್ :

26-3-81ರಂದು ರಾಜ್ಯ ಬೀಡಿ ಫೆಡರೇಷನ್ ಕರೆಯ ಅನುಗುಣವಾಗಿ ನೂರಾರು ಸಂಖ್ಯೆಯಲ್ಲಿ ಮಹಿಳೆಯರು ಮೆರವಣಿಗೆಯಲ್ಲಿ ತೆರಳಿ ಬೀಡಿ ಫ್ಯಾಕ್ಟರಿಗಳೆದುರು ಸತ್ಯಾಗ್ರಹ ಮಾಡಿದರು. ಕಾಂ. ಬಡೇಸಾಬ್ ಮತ್ತು ಕಾಂ. ಅಂಜಪ್ಪ ಮಾತನಾಡುತ್ತಾ ಬೀಡಿಮಾಲೀಕರ ಹಾಗೂ ಸರಕಾರದ ಬೇಜವಾಬ್ದಾರಿಯ ನೀತಿಯನ್ನು ಖಂಡಿಸಿದರು. ಕೂಡಲೇ ಕನಿಷ್ಟಕೂಲಿ ನಿಗದಿಮಾಡದಿದ್ದರೆ ರಾಜ್ಯದಾದ್ಯಂತ ಚಳುವಳಿಯನ್ನು ತೀವ್ರಗೊಳಿಸುವ ಎಚ್ಚರಿಕೆ ನೀಡಿದರು. ನಂತರ ಕಾಂ. ಎಸ್. ಜಿ. ಯೂನುಸ್ ಖಾನ್, ಕಾಂ. ಸಲೀಮಾ ಬೇಗಂ ಮೊದಲಾದವರು ಮಾತನಾಡುತ್ತಾ ಮುಂದಿನ ಹಂತದ ಹೋರಾಟಕ್ಕೆ ಸಿದ್ಧರಾಗಲು ಕರೆ ನೀಡಿದರು. ಸತ್ಯಾಗ್ರಹದ ಮುಂಖಂಡತ್ವವನ್ನು ಕಾಂ. ಸಲೀಮಾಬೇಗಂ ಮತ್ತು ಕಾಂ. ಯೂನೂಸ್‌ಖಾನ್‌ರು ವಹಿಸಿದ್ದರು.

ತುಮಕೂರು :

ರಾಜ್ಯ ಬೀಡಿ ಫೆಡರೇಷನ್‌ನ ಕರೆಯ ಮೇರೆಗೆ ತುಮಕೂರಿನಲ್ಲೂ ಬೀಡಿಕಾರ್ಮಿಕರು ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಆವರಣದಲ್ಲಿ ಒಂದು ದಿನದ ಧರಣಿ ಮುಷ್ಕರ ನಡೆಸಿದರು. ಮುಷ್ಕರಕ್ಕೆ ಮೊದಲು ಕೆಂಬಾವುಟಗಳನ್ನು ಹಿಡಿದು ನಗರದಲ್ಲೆಲ್ಲಾ ಮೆರವಣಿಗೆ ನಡೆಸಿದರು. ಮೆರವಣಿಗೆ ಮತ್ತು ಧರಣಿ ಸತ್ಯಾಗ್ರಹದ ನೇತೃತ್ವವನ್ನು ಕಾಂ. ಮಲ್ಲಯ್ಯ, ವಜೀರ್ ಮತ್ತು ಕಾಂ. ಹಾಜರಾಂಬಿ ಮಂತ್ರಿತರರು ವಹಿಸಿದ್ದರು.

ಹಾಸನ :

ಹಾಸನ ನಗರದಲ್ಲಿರುವ ಸಾವಿರಾರು ಕಾರ್ಮಿಕರು ವಿವಿಧ ಉದ್ಯಮಗಳಲ್ಲಿ ದುಡಿಯುತ್ತಿದ್ದು ಅವರನ್ನು ಸಂಘಟಿಸುವ ಉದ್ದೇಶದಿಂದ ಸಂಘಟನೆಯೊಂದನ್ನು ಪ್ರಾರಂಭಿಸಲಾಗಿದೆ. 'ಕಾಫೀ ಕ್ಯೂರಿಂಗ್, ಸಾಮಿಲ್ಸ್ ಮತ್ತು ಇತರ ಕಾರ್ಮಿಕರ ಸಂಘ' ಎಂಬ ಹೆಸರಿನಿಂದ ಪ್ರಾರಂಭವಾಗಿರುವ ಸಂಘಕ್ಕೆ ಅಧ್ಯಕ್ಷರಾಗಿ ಕಾಂ. ಸಿ. ನಂಜುಂಡಪ್ಪ ಮತ್ತು ಪ್ರಧಾನಕಾರ್ಯದರ್ಶಿಯಾಗಿ ಕಾಂ. ವಿ. ಸುಕುಮಾರ್ ಆಯ್ಕೆಯಾಗಿದ್ದಾರೆ. ಈ ಸಂಘದ ಆಫೀಸನ್ನು ಪ್ರಾರಂಭಿಸಲಾಗಿದ್ದು ಈ ನಿಮಿತ್ತ 29-3-81 ರಂದು ಸಭೆಯೊಂದನ್ನು ನಡೆಸಲಾಯಿತು.

ರಾಯಚೂರು :

29-3-81 ರಂದು ರಾಯಚೂರು ಜಿಲ್ಲಾ ಪ್ರಾಂತ ರೈತಸಂಘದ ವತಿಯಿಂದ ಸಭೆನಡೆದು ರಾಯಚೂರು ತಾಲ್ಲೂಕಾ ರೈತಸಂಘವನ್ನು ರಚನೆ ಮಾಡಲಾಯಿತು. ಈ ತಾಲ್ಲೂಕಾ ರೈತಸಮಿತಿಯನ್ನು ಕಾಂ. ಜನಾರ್ಧನ ರೆಡ್ಡಿ ಮತ್ತು ಕಾಂ. ಚಂದ್ರಶೇಖರ ಬಾಳೆಯುವರ ಸಂಚಾಲಕತ್ವದಲ್ಲಿ ರಚಿಸಲಾಯಿತು.

ಏಪ್ರಿಲ್ 20ರಂದು ಪ್ರಗತಿಪರ ಜನತಂತ್ರ ರಂಗದ ವತಿಯಿಂದ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ದೊಡ್ಡ ಪ್ರಮಾಣದಲ್ಲಿ ರೈತ-ಕಾರ್ಮಿಕರನ್ನು ಸಂಘಟಿಸಬೇಕೆಂದು ತೀರ್ಮಾನಿಸಲಾಯಿತು.

ಬಂಟ್ವಾಳ :

29-3-81ರಂದು ದ.ಕ. ಜಿಲ್ಲೆಯ ಬಂಟ್ವಾಳದಲ್ಲಿ ತಾಲ್ಲೂಕು ಮಟ್ಟದ ಅಂಗವಿಕಲರ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಸುಮಾರು 300ಕ್ಕೂ ಹೆಚ್ಚು ಸ್ತ್ರೀ-ಪುರುಷ ಅಂಗವಿಕಲರು ಭಾಗವಹಿಸಿದ್ದರು. ಬಂಟ್ವಾಳ ತಾಲ್ಲೂಕಾ ತಹಸೀಲ್ದಾರರಾದ ಶ್ರೀ ಎಂ. ಕೆ. ವಾರಿಯರ ಇವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೇಶವರಾವ ಶೆಣೈ ಇವರು ಸಮ್ಮೇಳನವನ್ನು ಉದ್ಘಾಟಿಸಿದರು. ಸಮ್ಮೇಳನದ ಸಂಚಾಲಕ ಎಚ್. ಪಾಂಡುರಂಗ ನಾಯ್ಕರು ಸ್ವಾಗತಿಸಿದರು. ಸಂಘದ ಅಧ್ಯಕ್ಷ ಶ್ರೀ ಮಹೇಶರು ಸಂಘದ ಧ್ಯೇಯ ಧೋರಣೆಗಳನ್ನು ವಿವರಿಸಿದರು.

●

ಮುಂಗಡ ಪತ್ರದಲ್ಲಿ ಬರಗಾಲಕ್ಕೆ ಪರಿಹಾರವಿಲ್ಲ

ಕರ್ನಾಟಕ ರಾಜ್ಯದ 19 ಜಿಲ್ಲೆಗಳಲ್ಲಿ 15 ಜಿಲ್ಲೆಗಳು ಅಭಾವ ಪರಿಸ್ಥಿತಿಗೆ ತುತ್ತಾಗಿವೆ ಎಂದು ಲೋಕಸಭೆಯಲ್ಲಿ ಕೇಂದ್ರ ಕೃಷಿಮಂತ್ರಿ ರಾವ್ ಬೀರೇಂದ್ರಸಿಂಗ್ ಹೇಳಿದ್ದಾರೆ. ಅಭಾವ ಪರಿಹಾರ ಕಾಮಗಾರಿಗಳಿಗೆ ಹಣದ ಕೊರತೆಯಿಲ್ಲ. ಇಲ್ಲಿಯವರೆಗೆ ಅಭಾವ ಪರಿಹಾರಕ್ಕಾಗಿ 10.50 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿಗಳು ಕೇಳಿದಷ್ಟು ಹಣ ಒದಗಿಸಲು ಸರಕಾರ ಸಿದ್ಧವಿದೆಂದು ವಿಧಾನಸಭೆಯಲ್ಲಿ ಕಂದಾಯ ಮಂತ್ರಿ ಮಲ್ಲಿಕಾರ್ಜುನ ಖರ್ಗೆಯವರು ಹೇಳಿಕೆ ನೀಡಿದ್ದಾರೆ.

ಒಂದು ದೇಶ ಮತ್ತು ರಾಜ್ಯದ ಬೆಳವಣಿಗೆಯ ಕಾರ್ಯಕ್ರಮಕ್ಕೆ, ಅಭಿವೃದ್ಧಿ ಕೆಲಸಗಳಿಗೆ ಲೋಕಸಭೆ, ವಿಧಾನ ಸಭೆಗಳಲ್ಲಿ ಪ್ರತಿವರ್ಷ ಮಂಡಿಸಲ್ಪಡುವ ಮುಂಗಡ ಪತ್ರವೇ ಕೈಗನ್ನಡಿಯಾಗಿರುತ್ತದೆ. ಹಿಂದಿನ ವರ್ಷದ ಕಾರ್ಯಭಾರಗಳ ಸಮೀಕ್ಷೆ ನಡೆಸಿ, ಮುಂದಿನ ವರ್ಷದ ಗುರಿ ಮುಟ್ಟುವಂತೆ ನಿರೂಪಣೆ ಮಂಡಿಸುವುದು. ಒಪ್ಪಿಗೆ ಪಡೆಯುವುದು ಆರ್ಥಿಕ ಮಂತ್ರಿಯ ಕರ್ತವ್ಯ.

ಬಂಡವಾಳಶಾಹಿ ವರ್ಗದ ಆರ್ಥಿಕ ರಾಜಕೀಯ ನೀತಿಯನ್ನೇ ಮುಂದುವರಿಸುತ್ತಿರುವ ಇಂದಿರಾ ಕಾಂಗ್ರೆಸ್ ಸರಕಾರದ ಮುಂಗಡ ಪತ್ರ ಮಂಡನೆಯ ವೈಖರಿಯೇ ಬೇರೆಯಾಗಿರುತ್ತದೆ. ರಾಜ್ಯದ ಜನರೆದುರಿಸುತ್ತಿರುವ ಸಮಸ್ಯೆಗಳೇ ಬೇರೆ, ಸರಕಾರ ಮಾಡುವ ಖರ್ಚಿನ ರೂಪವೇ ಬೇರೆ.

ದೇಶ ಸ್ವಾತಂತ್ರ್ಯ ಪಡೆದ ಪೂರ್ವದಿಂದಲೂ ರಾಜ್ಯದ ಹೆಚ್ಚಿನ ಪ್ರದೇಶ ಬರಗಾಲದ ಬವಣೆಗೆ, ನೆರೆ ಹಾವಳಿಯ ದುರಂತಕ್ಕೆ ತುತ್ತಾಗುತ್ತಿದ್ದರೂ ಇತ್ತೀಚಿನ ವರ್ಷಗಳಲ್ಲಿ ಈ ಎರಡೂ ಅಪಾಯಗಳೂ ಮತ್ತಷ್ಟು ಭೀಕರವಾಗುತ್ತಿರುವಾಗ ಈ ವರ್ಷವಂತೂ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ನೆಲೆಯಿಲ್ಲದಿರುವಾಗ ಅಂದಾಜು ಪತ್ರಿಕೆಯಲ್ಲಿ ಇಂಥ ದಾರುಣ ಪರಿಸ್ಥಿತಿಯ ಕಾಯಂ ಪರಿಹಾರಕ್ಕೆ ಪ್ರಾಧಾನ್ಯತೆ ಕೊಡುವುದು ಅತ್ಯಗತ್ಯವಿತ್ತು. ನಮ್ಮ ಆರ್ಥಿಕ ಮಂತ್ರಿಯವರು ಈ ಭಾರವನ್ನು ಕೇಂದ್ರ ಸರಕಾರದ ಮೇಲೆ ಹೇರಿ ಪಾರಾಗಲು ಪ್ರಯತ್ನ ನಡೆಸಿದ್ದಾರೆ. ಅಷ್ಟೇ ಅಲ್ಲ, ಬರಗಾಲ ಪರಿಸ್ಥಿತಿಯ ಕಾರಣದಿಂದ ಯೋಜನೆಯ ಒಟ್ಟು ಖರ್ಚು ರೂ. 392.55 ಕೋಟಿಯಿಂದ ರೂ. 367.30 ಕೋಟಿಗೆ ಇಳಿಸಬೇಕಾಗಿ ಬಂತು ಎಂಬುದನ್ನೂ ತಿಳಿಯಪಡಿಸಿದ್ದಾರೆ. ಆದರೆ ಕರ್ನಾಟಕ ರಾಜ್ಯದ ಹೆಚ್ಚಿನ ಪ್ರದೇಶ ಪ್ರತಿವರ್ಷ ಎದುರಿಸುತ್ತಿರುವ ಬರಗಾಲ ನಿವಾರಣೆಗೆ ಎಷ್ಟು ಹಣದ ವ್ಯವಸ್ಥೆ ಮಾಡಲಾಗಿದೆಂಬುದನ್ನು ಮಾತ್ರ ಕೇಂದ್ರ ಸರಕಾರವಾಗಲೀ ರಾಜ್ಯ ಸರಕಾರವಾಗಲೀ ಸ್ಪಷ್ಟವಾಗಿ ತಿಳಿಸಿಲ್ಲ.

ಮುಖ್ಯಮಂತ್ರಿ ಗುಂಡೂರಾವ್ ಅವರು ನಾಲ್ಕು ತಿಂಗಳ ಹಿಂದೆ ಬಿಜಾಪುರಕ್ಕೆ ಸಂದರ್ಶನ ವಿತ್ತಾಗ, ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಾರ್ಟಿಯ ಸೂಚನೆಯನ್ನೊಪ್ಪಿಕೊಂಡು, ಬರಗಾಲ ಪರಿಸ್ಥಿತಿಯ ಅಭ್ಯಾಸ ಮಾಡಿ, ಅದರ ನಿವಾರಣೆಗಾಗಿ ಖಾಯಂ ರೀತಿಯ ಪರಿಹಾರವನ್ನು ಶಿಫಾರಸ ಮಾಡುವ ಸಲುವಾಗಿ ಒಂದು ಉಚ್ಚಮಟ್ಟದ ಕಮೀಷನ್ ನೇಮಿಸಲಾಗುವುದೆಂಬ ಆಶ್ವಾಸನೆ ಕೊಟ್ಟಿದ್ದರು. ಹೆಚ್ಚು ಕಡಿಮೆ ಪ್ರತಿವರ್ಷ ಬರಗಾಲ ನಿವಾರಣೆಯ ಹೆಸರಿನಲ್ಲಿ ಬರೇ ಕಚ್ಚಾ ರಸ್ತೆ ಮಾಡುವ ಕೆಲಸಕಾಗಿ ಕೋಟ್ಯಾವಧಿ ರೂಪಾಯಿ ಖರ್ಚು ಮಾಡುತ್ತ ಬಂದದ್ದಾಯಿತು. ಒಂದು ಮಳೆ ಬಂದರೆ ರಸ್ತೆ ಎಲ್ಲ ಕೊಚ್ಚಿಕೊಂಡು ಹೋಗಿ ಬಿಡುತ್ತಿತ್ತು. ಬರಗಾಲ ಕಾಮಗಿರಿಯ ಪತ್ತೆಯಾಗುತ್ತಿರಲಿಲ್ಲ. ಮುಂದಿನ ವರ್ಷವೂ ಅದೇ ರಸ್ತೆಗಾಗಿ ಮತ್ತೆ ಹಣದ ದುರುಪಯೋಗವಾಗುತ್ತಿತ್ತು. ಜನರಿಗೆ ಕೆಲಸ ಒದಗಿಸುವದಕ್ಕಾಗಿಯಷ್ಟೇ ಕೋಟ್ಯಾವಧಿ ರೂ. ಖರ್ಚು ಮಾಡುವುದು. ಸುಳ್ಳು ಹಾಜರಿ ಹಾಕಿ ಹಣ ಪಡೆದು, ಮೇಸ್ತ್ರಿಯಿಂದ ಹಿಡಿದು ಇಂಜನಿಯರ ವರೆಗೂ ಪಾಲು ಗಿಟ್ಟಿಸುವುದೇ ಬರಗಾಲ ಕಾಮಗಿರಿಯ ಉದ್ದೇಶ. ನೀರಿನ ಮೂಲ ಕಂಡುಹಿಡಿದು, ಅದರ ಉಪಯೋಗ ಸಾಧ್ಯವಿದೆಯೋ, ನದಿ-ನಾಲಾಗಳಿಗೆ 10-15 ಅಡಿ ಎತ್ತರದ ಒಡ್ಡುಗಳನ್ನು ಕಟ್ಟಿ ನೆರೆಹಾವಳಿಯಲ್ಲಿ ಹರಿದುಹೋಗುವ ನೀರನ್ನು ಹಿಡಿದಿಡುವುದು ಸಾಧ್ಯವೆ, ಕೆರೆ-ಭಾವಿಗಳ ಸದುಪಯೋಗ ಕಾಡು ಬೆಳವಣಿಗೆ, ನೀರಾವರಿ ಯೋಜನೆಗಳು ಅವುಗಳ ವಿಸ್ತರಣೆ-ಇಂಥ ಸೂಚನೆಗಳನ್ನೂ ಹಲವಾರು ಸಲ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಸರಕಾರದ ಮುಂದೆ ಮಂಡಿಸಿತ್ತು. ಆದರೆ ಪ್ರತಿ ವರ್ಷ ಬರಗಾಲದ ಹೆಸರಿನಲ್ಲಿ ಸಾಕಷ್ಟು ಹಣ ಗಿಟ್ಟಿಸಲಿರುವ ಅವಕಾಶವನ್ನೇ ಕಳೆದುಕೊಳ್ಳಲು ಅಧಿಕಾರಿಗಳಾಗಲೀ ಮಂತ್ರಿಗಳಾಗಲೀ, ಆಳುವ ಪಕ್ಷದ ರಾಜಕಾರಣಿಗಳಾಗಲೀ ತಯಾರಿಲ್ಲ. ಆ ಕಾರಣದಿಂದಲೇ ಹಿಂದಿನ ಮಂತ್ರಿಗಳಾಗಲೀ ಈಗಿನ ಮಂತ್ರಿಗಳಾಗಲೀ ಬರಗಾಲ ನಿವಾರಣೋಪಾಯ ಸೂಚಿಸಲು ಉಚ್ಚಮಟ್ಟದ ಕಮಿಷನ್ ನೇಮಿಸಲು ತಯಾರಿಲ್ಲ. ಅಂಥ ಪರಿಹಾರ ಕಾರ್ಯಗಳ ಕಡೆ ದೃಷ್ಟಿ ಹರಿಸಲೂ ಸಿದ್ಧರಿಲ್ಲ. ಇದು ಬಂಡವಾಳಶಾಹಿ ಮನೋವೃತ್ತಿಲ್ಲದೆ ಮತ್ತೇನು?

ಇದೇ ವೀರಪ್ಪ ಮೊಯಿಲಿಯವರು ಹೋದ ವರ್ಷದ ಮುಂಗಡ ಪತ್ರ ಮಂಡಿಸಿದಾಗಲೂ ಈಗಿರುವ ಒಟ್ಟು ನೀರಾವರಿ ವಿಸ್ತೀರ್ಣವನ್ನು ಒಂದು ಲಕ್ಷ ಹೆಕ್ಟಾರಿನಷ್ಟು ಹೆಚ್ಚಿಸಲಾಗುವುದೆಂದು ಹೇಳಿದ್ದರು. 75 ಲಕ್ಷ ಟನ್ ಆಹಾರ ಧಾನ್ಯ ಉತ್ಪಾದಿಸಲು ಈ ವರ್ಷ ಕೂಡ ಒಂದು ಹೆಕ್ಟಾರ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗುವುದೆಂದು ಹೇಳಿದ್ದಾರೆ. ಆದರೆ ಹೋದ ವರ್ಷದ ಹೇಳಿಕೆ ಬರೇ ಪೇಪರ್ ಹೇಳಿಕೆಯಾಗಿಯೇ ಯಾಕೆ ಉಳಿಯಿತೆಂಬುದಕ್ಕೆ ಆರ್ಥಿಕ ಮಂತ್ರಿಗಳು ವಿವರಣೆ ನೀಡಲಿಲ್ಲ.

54 ಕೋಟಿ ರೂಪಾಯಿ ಖರ್ಚಿನಿಂದ ಆಲಮಟ್ಟಿ ಯೋಜನೆ 10 ವರ್ಷಗಳ ಹಿಂದೆಯೇ ಪೂರ್ಣಗೊಳ್ಳಬೇಕಾಗಿದ್ದು. ಈಗ ರೂ. 320 ಕೋಟಿ ಖರ್ಚಿನಿಂದ 1983ರಲ್ಲಿ ಇದರ ಮೊದಲನೇ ಹಂತದ ಕೆಲಸ ಮುಗಿಸಲಾಗುವುದೆಂದು ಮಂತ್ರಿಗಳು ಹೇಳುತ್ತಿದ್ದಾರೆ. ರೂಪಾಯಿಯ ಬೆಲೆ ಯಾವ ರೀತಿ ಕುಸಿಯುತ್ತಿದೆಯೋ ಮಂತ್ರಿಗಳ ಹೇಳಿಕೆಗಳ ಸತ್ಯಾಂಶವೂ ಅದೇ ರೀತಿ ಕಡಿಮೆಯಾಗುತ್ತಿದೆ.

19 ಜಿಲ್ಲೆಗಳ ಪೈಕಿ 15 ಜಿಲ್ಲೆಗಳ ಬರಗಾಲ ಪರಿಸ್ಥಿತಿಯ ಪರಿಹಾರವೆಂದರೇನು? ಕರ್ನಾಟಕ ರಾಜ್ಯದ 4/5 ಅಂಶ ಪ್ರದೇಶದ ಲಕ್ಷಾವಧಿ ರೈತರ ಸಮಸ್ಯೆ. ಅವರ ಉದ್ಯೋಗದ ಸಮಸ್ಯೆ, ಆಹಾರ ಧಾನ್ಯ ಉತ್ಪಾದನೆಯ ಮೇಲಿನ ಸಮಸ್ಯೆ, ಕೈಗಾರಿಕೆಗಳಿಗೆ ಕಚ್ಚಾಮಾಲು ಒದಗಿಸುವ ಸಮಸ್ಯೆ. ಕೈಗಾರಿಕೆಗಳ ಬೆಳವಣಿಗೆ, ಹೆಚ್ಚಳದ ಸಮಸ್ಯೆ. ಈ ಗಂಭೀರ ಜೀವಾಳ ಸಮಸ್ಯೆಯ ಕುರಿತು ಆಳವಾಗಿ ವಿಚಾರ ಮಾಡಲೂ ಸರಕಾರ ತಯಾರಿಲ್ಲೆಂದು ಹೇಳುವಾಗ, ಇಂಥ ಜನವಿರೋಧಿ ಸರಕಾರವನ್ನು ನಮ್ಮ ಜನತೆ ಎಂಥ ಸಹಿಷ್ಣುತೆಯಿಂದ ಸಹಿಸುತ್ತಿದೆ, ಆಶ್ಚರ್ಯವಲ್ಲವೇ? ಜನಜಾಗೃತಿಯಿಲ್ಲದಿರುವುದೇ ಇವಕ್ಕೆ ಮುಖ್ಯ ಕಾರಣ. ಚಾರಿತ್ರಿಕವಾದ ಈ ಜವಾಬ್ದಾರಿಯನ್ನು ವಿರೋಧಿ ಪಕ್ಷಗಳು, ಮುಖ್ಯವಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು, ಪಾರ್ಟಿಗಳು ಮಾಡಬೇಕಾಗಿದೆ. ಅವರ ಹಿಂದೇಟಿನಿಂದಾಗಿಯೇ ಕರ್ನಾಟಕ ರಾಜ್ಯದಲ್ಲಿ ಇಂಥ ಸರಕಾರವನ್ನು ಸಹಿಸುವಂತಾಗಿದೆ. ಚರಿತ್ರೆ ತಮ್ಮ ಮೇಲೆ ಹೇರಿರುವ ಮಹತ್ತರವಾದ ಜವಾಬ್ದಾರಿಯನ್ನು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಹೊತ್ತು ಅದನ್ನು ಕಾರ್ಯಗತಗೊಳಿಸುವುದು ಅತ್ಯಗತ್ಯ. ಈ ದಿಸೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಮಿತ್ರಿತರ ಪುರೋಗಾಮಿ ಎಡ ಪಾರ್ಟಿಗಳು ಗಮನ ಹರಿಸುವುದು ತುರ್ತು ಕ್ರಮವಾಗಬೇಕು.

—ಎನ್. ಕೆ. ಉಪಾಧ್ಯಾಯ

ಖ್ಯಾತ ಪತ್ರಿಕೆಗಳ ವಿಕೃತ ಪ್ರಚಾರ

ಎಂ. ಬಸವಪುನ್ನಯ್ಯ

(ಹಿಂದಿನ ಸಂಚಿಕೆಯಿಂದ)

ಸಿ.ಪಿ.ಎಸ್.ಯು. ಮತ್ತು ಸಿ.ಪಿ.ಸಿ.ಗಳ ಜತೆಯಲ್ಲಿನ ವಿಚಾರದಲ್ಲಿ ಈ ಮೇಲಿನ ತಾತ್ವಿಕಧೋರಣೆಯೇ ಸಿ.ಪಿ.ಐ.(ಎಂ)ನ್ನು ಇಲ್ಲಿಯವರೆಗೂ ಮುನ್ನಡೆಸಿದೆ. 1964ರಲ್ಲಿ ಸಿ.ಪಿ.ಐ.ನಿಂದ ಸಿ. ಪಿ. ಐ.(ಎಂ) ಹೊರಬಂದಾಗ ತನ್ನ ಜತೆ ಸಂಬಂಧ ಬೆಳೆಸಿಕೊಳ್ಳಲು ಒಂದು ಔಪಚಾರಿಕವಾದ ವಿನಂತಿಯನ್ನು ಸಿ.ಪಿ.ಎಸ್.ಯು. ಮತ್ತಿತರ ಪಕ್ಷಗಳಿಗೂ ಸಿ.ಪಿ.ಐ.(ಎಂ) ಕಳಿಸಿತ್ತು. ಆದರೆ ಸಿ.ಪಿ.ಐ. ಜತೆಯಲ್ಲಿನ ತನ್ನ ಸಂಬಂಧವನ್ನು ಸಿ. ಪಿ. ಎಸ್.ಯು. ಮುಂದುವರಿಸಿತೇ ವಿನಃ ನಮ್ಮೊಟ್ಟಿಗೆ ಯಾವದೇ ಔಪಚಾರಿಕ ಸಂಬಂಧವನ್ನು ಬೆಳೆಸಿಕೊಳ್ಳಲಿಲ್ಲ. ಅವಿಭಾಜ್ಯ ಸಿ.ಪಿ.ಐ.ನ ಜತೆ ತನ್ನ ಸಂಬಂಧವನ್ನು 1960ರಲ್ಲೇ ಕಳೆದುಕೊಂಡಿದ್ದ ಚೀನಾ ಕಮ್ಯುನಿಸ್ಟ್ ಪಾರ್ಟಿಯು ನಮ್ಮ ಜೊತೆ ಬಾಂಧವ್ಯವನ್ನು ಬೆಳೆಸಿಕೊಂಡಿತು. ಬಂಡವಾಳಶಾಹಿಗಳಿಂದ, ಸಾಮ್ರಾಜ್ಯಶಾಹಿಗಳಿಂದ ಮತ್ತು ಕಮ್ಯುನಿಸ್ಟ್ ವಿರೋಧಿಗಳಿಂದ ರಷ್ಯಾ ಅಥವಾ ಚೀನಾದ ಮೇಲಾಗಲೀ ದಾಳಿಯಾದರೆ ಆ ರಾಷ್ಟ್ರಗಳ ಬೆಂಬಲಕ್ಕೆ ನಿಂತುಕೊಳ್ಳುವುದು, ಅವುಗಳ ಕಮ್ಯುನಿಸ್ಟ್ ಪಕ್ಷ ನಮ್ಮ ಜೊತೆ ಸ್ನೇಹ ಮತ್ತು ಸೌಹಾರ್ದತೆಯನ್ನು ಇಟ್ಟುಕೊಂಡಿರಲಿ ಅಥವಾ ಇಲ್ಲದಿರಲಿ, ತನ್ನ ಆದ್ಯ ಕರ್ತವ್ಯವೆಂದು ನಾವು ಹಿಂದಿನಿಂದಲೂ ಹೇಳತ್ತ ಬಂದಿದೆ ಮತ್ತು ಮುಂದೆಯೂ ಹೇಳುತ್ತದೆ.

ರಷ್ಯಾ ಮತ್ತು ಚೀನಾ ಕಮ್ಯುನಿಸ್ಟ್ ಪಕ್ಷಗಳ ಧೋರಣೆಗೆ ಭಿನ್ನವಾದ ತನ್ನ ನಿಲುವನ್ನು ವ್ಯಕ್ತಪಡಿಸಲು ಸಿ.ಪಿ.ಐ.(ಎಂ) ಎಂದೂ ಹಿಂಜರಿದಿಲ್ಲ ಮತ್ತು ಅಂಥಾ ಸಂದರ್ಭ ಮುಂದೆ ಬಂದರೆ ಹಾಗೆ ಮಾಡಲು ಮುಂದೂ ಹಿಂಜರಿಯುವದಿಲ್ಲ. ನಿಜ ಹೇಳಬೇಕೆಂದರೆ ಪ್ರತಿಯೊಂದು ಕಮ್ಯುನಿಸ್ಟ್ ಪಕ್ಷಕ್ಕೂ ಈ ಸ್ವಾಭಾವಿಕ ಹಕ್ಕು ಇದ್ದೇ ಇದೆ. ಅದಿಲ್ಲದಿದ್ದರೆ ಪಕ್ಷಗಳ ಸಮಾನತೆ ಮತ್ತು ಸ್ವಾತಂತ್ರ್ಯತೆಯ ತತ್ವಗಳು ಬರೀ ಪೊಳ್ಳು ಘೋಷಣೆಯಾಗಿಯೇ ಇರುತ್ತದೆ ಮತ್ತು ಅಣಕು ಆಗಿ ಉಳಿಯುತ್ತದೆ. ಹಾಗೆಂದ ಮಾತ್ರಕ್ಕೆ ಬೇರೆ ಕಮ್ಯುನಿಸ್ಟ್ ಪಕ್ಷಗಳ ಜೊತೆ ಭಿನ್ನಾಭಿಪ್ರಾಯವಿದೆಯೆಂಬ ಮಾತ್ರಕ್ಕೆ ಕಂಡಕಂಡಲ್ಲೆಲ್ಲ ಅವುಗಳನ್ನು ದೂಷಿಸಬೇಕೆಂದು ಇದರರ್ಥವೇ? ಅದು ಅಪೇಕ್ಷಣೀಯವೂ ಮತ್ತು ಫಲಕಾರಿಯೂ ಆಗಬಹುದೆಂದು ನಾವು ಯೋಚಿಸುವದಿಲ್ಲ. ಉದಾಹರಣೆಗೆ ಚೀನಾ ಕಮ್ಯುನಿಸ್ಟ್ ಪಾರ್ಟಿಯವರು ರಷ್ಯಾ ದೇಶವನ್ನು ಸಮಾಜವಾದೀ ಸಾಮ್ರಾಜ್ಯಶಾಹಿಗಳು ಇತ್ಯಾದಿಯೆಂದು ಬಣ್ಣಿಸುವದನ್ನಾಗಲೀ ಅಥವಾ ರಷ್ಯಾ ಕಮ್ಯುನಿಸ್ಟ್ ಪಾರ್ಟಿಯವರು ಚೀನಾ ದೇಶವನ್ನು ನೌಕರಶಾಹಿ ಯುದ್ಧಪ್ರೇಮಿಗಳು ಎಂದು ಬಣ್ಣಿಸುವದನ್ನಾಗಲೀ ನಾವು ಸುತರಾಂ ಒಪ್ಪುವದಿಲ್ಲ. ಈ ವಿಚಾರದಲ್ಲಿ ನಾವು ಸ್ಪಷ್ಟವಾಗಿ ಮತ್ತು ಬಹಿರಂಗವಾಗಿ ನಮ್ಮ ನಿಲುವನ್ನು ವ್ಯಕ್ತಪಡಿಸಿದ್ದೇವೆ. ಇದರಿಂದ ಸಮಾಜವಾದಿ ಚೀನಾವನ್ನು 'ಸಾಮ್ರಾಜ್ಯಶಾಹಿಗಳ ಸ್ನೇಹಿತ ಹಾಗೂ ಬಾಲಬಡುಕ ಎಂದು ನಾವು ನಿಂದಿಸಬೇಕೆನ್ನುವ ಬೇಡಿಕೆಯನ್ನು 'ವಿಶೇಷ ವರದಿಗಾರ' ಮುಂದಿಟ್ಟರೆ ನಾವು ಮಣಿಯಲು ಸಾಧ್ಯವಿಲ್ಲ. ನಮ್ಮ ಪ್ರಕಾರ ಒಂದು ಸಮಾಜವಾದೀ ರಾಷ್ಟ್ರದ ಧೋರಣೆಯನ್ನು ಅಥವಾ ನೀತಿಯನ್ನು ನಾವು ಟೀಕೆ ಮಾಡುವ ಅಥವಾ ವಿರೋಧಿಸುವ ವಿಚಾರಕ್ಕೂ, ಸಾಮ್ರಾಜ್ಯಶಾಹಿಗಳನ್ನು ನಾವು ಟೀಕೆ ಮಾಡುವ ಅಥವಾ ವಿರೋಧಿಸುವ ವಿಚಾರಕ್ಕೂ ಬಹಳ ವ್ಯತ್ಯಾಸವಿದೆ. ಬಂಡವಾಳಶಾಹಿ ಪರ ಹಾಗೂ ಕಮ್ಯುನಿಸ್ಟ್ ವಿರೋಧಿ ವಿಮರ್ಶೆಗಾರರು ಇದನ್ನೇ ಪಕ್ಷಪಾತವೆಂದು ಕರೆಯುವದಾದರೆ ನಾವು ಆ ಅಪರಾಧವನ್ನು ಒಪ್ಪಿಕೊಳ್ಳುತ್ತೇವೆ.

ಚರ್ಚೆಯ ಅಂಶವನ್ನು ಮುಗಿಸುವ ಮೊದಲು ತಪ್ಪು ಧೋರಣೆಯನ್ನು ಅನುಸರಿಸುತ್ತಿರುವ ಸಮಾಜವಾದೀ ರಾಷ್ಟ್ರಗಳು ಖಂಡಿತವಾಗಿಯೂ ಆದಷ್ಟು ಬೇಗ ತಮ್ಮ ನೀತಿಯನ್ನು ಸರಿಪಡಿಸಿಕೊಳ್ಳುತ್ತಾರೆ ಮತ್ತು ಕಟ್ಟಕಡೆಯಲ್ಲಿ ಸಮಾಜವಾದ ಗೆಲ್ಲುತ್ತದೆ ಎಂದು ನಂಬಿಕೆಯನ್ನಿಟ್ಟುಕೊಂಡು ನಾವು ಮುಂದುವರೆಯೋಣ. ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ವ್ಯವಸ್ಥೆಯ ಪ್ರತಿಪಾದಕರು ಮರಣಾವಸ್ಥೆಯಲ್ಲಿರುವ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ವ್ಯವಸ್ಥೆಯ ಘೋರಪಾತಕಗಳನ್ನು ಮರೆಮಾಚಿ ಸಮಾಜವಾದ ಮತ್ತು ಸಮತಾವಾದವನ್ನು ಸತತವಾಗಿ ಹೀಗಳೆಯುತ್ತಿದ್ದರೆ ಸಮಾಜವಾದ ಮತ್ತು ಸಮತಾವಾದವನ್ನು ರಕ್ಷಿಸುವ ಮತ್ತು ಪ್ರತಿಪಾದಿಸುವ ಹಕ್ಕು ಮತ್ತು ಕರ್ತವ್ಯ ಕಮ್ಯುನಿಸ್ಟರಾದ ನಮಗೆ ಇದೆ.

ಆರು ಪಕ್ಷಗಳ ಸಮನ್ವಯ

ಏಕಸ್ವಾಮ್ಯ ಒಡೆತನದ ಪತ್ರಿಕೋದ್ಯಮದ 'ವಿಶೇಷ ವರದಿಗಾರ'ನ ಮತ್ತೊಂದು ಶೋಧನೆಯೆಂದರೆ– ನಮ್ಮ ಪೊಲಿಟ್‌ಬ್ಯೂರೋದಲ್ಲಿನ ಒಡಕು. ಆರು ಪಕ್ಷಗಳ ವಿರೋಧಿ ಬಣ ಮತ್ತು ಅದನ್ನು ಬೆಂಬಲಿಸುವ ಬಣ ಎಂಬ ಎರಡು ಗುಂಪುಗಳಿವೆ ಎಂಬುದು. ನಮ್ಮ ಟೀಕಾಕಾರರಿಗೆ ನಾವು ಹೇಳಬೇಕಾದ್ದು "ಆರು ಪಕ್ಷಗಳ ವಿರೋಧಿ ಬಣ ಎಂಬುದು ಇಲ್ಲವೇ ಇಲ್ಲ. ಆರು ಪಕ್ಷಗಳು ಸಮನ್ವಯ ಸಮಿತಿಯಲ್ಲಿ ಅದರಲ್ಲಿ ಕಾಂಗ್ರೆಸ್ (ಯು), ಲೋಕದಳ, ಸಿ.ಪಿ.ಐ., ಸಿ.ಪಿ.ಐ.(ಎಂ), ಆರ್. ಎಸ್. ಪಿ. ಮತ್ತು ಫಾರ್ವರ್ಡ್ ಬ್ಲಾಕ್ ಇವುಗಳ ಪ್ರತಿನಿಧಿಗಳು ಇದ್ದಾರೆ. ಅದನ್ನು ಸಾಮಾನ್ಯವಾಗಿ 'ಸಂಯುಕ್ತ ರಂಗ', 'ಸಂಯುಕ್ತ ಬಣ' ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದೆ. "ಸಾಮಾನ್ಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಸರಕಾರ ರಚಿಸುವ" ಅರ್ಥ ಮೇಲಿನ ಶಬ್ದಗಳಾಗಿವೆ. ಆದರೆ ಆ ರೀತಿಯ ಯಾವುದೇ ಕಾರ್ಯಕ್ರಮಗಳು 'ಆರು ಪಕ್ಷಗಳ ಸಮನ್ವಯ ಸಮಿತಿಗೆ ಇಲ್ಲ. 1980ರ ಸೆಪ್ಟೆಂಬರ್ 27 ಮತ್ತು 28ರಂದು ಬೆಲೆಏರಿಕೆ ವಿರೋಧ, ಕೋಮು ಸೌಹಾರ್ದತೆ ಮತ್ತು ನಾಗರಿಕ ಹಕ್ಕುಗಳಿಗಾಗಿ ರಾಷ್ಟ್ರೀಯ ಸಮ್ಮೇಳನ ನಡೆದಾಗ ಈ 'ಆರು ಪಕ್ಷಗಳ ಸಮನ್ವಯ ಸಮಿತಿ'ಯನ್ನು ರಚಿಸಲಾಯಿತು. ಎಡರಂಗ ಎಂದಾಗಲೀ ಅಥವಾ ಎಡ ಮತ್ತು ಪ್ರಜಾಪ್ರಭುತ್ವರಂಗ ಎಂದಾಗಲೀ ತಮ್ಮನ್ನು ತಾವು ಈ ಸಮಿತಿಯವರು ಕರೆದುಕೊಳ್ಳುವುದಿಲ್ಲ. ತಾವೊಂದು 'ರಾಷ್ಟ್ರೀಯ ಪರ್ಯಾಯ' ಎಂದು ಕರೆದುಕೊಳ್ಳುವ ಕಾರ್ಯಕ್ರಮಗಳನ್ನು ಹೊಂದಿದ್ದೇವೆಂದು ಕೂಡ ಅವರು ಸೋಗು ಹಾಕಿಲ್ಲ. ಕೆಲವು ನಿರ್ದಿಷ್ಟ ಬೇಡಿಕೆಗಳಿಗಾಗಿ ಸಂಯುಕ್ತ ಹೋರಾಟ ಮಾಡುವ ಒಂದು ನಿಯಮಿತ ಕಾರ್ಯಕ್ರಮವನ್ನು ಮಾತ್ರ ಹಾಕಿಕೊಂಡಿದ್ದಾರೆ. ಆರು ಪಕ್ಷಗಳ ಸಮನ್ವಯ ಸಮಿತಿಯ 'ಹೋರಾಟಕ್ಕೆ ಕರೆ'ಯೆಂದು ಒಂದು ಸಾಲನ್ನು ಇಲ್ಲಿ ಉಲ್ಲೇಖಿಸಬಹುದು.

"ತಮ್ಮ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಲು ಮತ್ತು ಮೇಲ್ಕಾಣಿಸಿದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಒಂದು ಐಕ್ಯಹೋರಾಟವನ್ನು ಪ್ರಾರಂಭಿಸಬೇಕೆಂದು ಎಲ್ಲ ವರ್ಗಗಳ ಜನರಿಗೂ ಈ ರಾಷ್ಟ್ರೀಯ ಸಮ್ಮೇಳನ ಕರೆ ನೀಡುತ್ತದೆ. ಈ ಐಕ್ಯ ಚಳುವಳಿಯು ಪ್ರತಿಭಟನಾ ಸಭೆ, ಮೆರವಣಿಗೆ, ಸತ್ಯಾಗ್ರಹ, ಧರಣಿ, ಸಮ್ಮೇಳನ, ವಿಚಾರ ಸಂಕಿರಣ ಹಾಗೂ ಹರತಾಳ, ಬಂದ್‌ಗಳ ರೂಪದಲ್ಲಿರಬಹುದು".

"ಎಲ್ಲ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ಮತ್ತು ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು ನಂಬಿಕೆ ಇರುವವರು ದುಷ್ಟ ಕೋಮುವಾದಿ ಮತ್ತು ಸರ್ವಾಧಿಕಾರೀ ಭಾವನೆಗಳ ವಿರುದ್ಧ ದೇಶವ್ಯಾಪೀ ಪ್ರಚಾರಕಾರ್ಯವನ್ನು ಕೈಗೊಳ್ಳಬೇಕೆಂದು ಈ ಸಮ್ಮೇಳನ ಕರೆ ನೀಡುತ್ತಿದೆ".

ನಾಗರಿಕ ಸ್ವಾತಂತ್ರ್ಯ ಮತ್ತು ಜನರ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಆಗುತ್ತಿರುವ ಯೋಜಿತ ದಾಳಿಗಳ ವಿರುದ್ಧ ಐಕ್ಯ ಚಳುವಳಿ ಪ್ರಾರಂಭವಾಗಬೇಕೆಂದೂ ಈ ಸಮ್ಮೇಳನ ಮನವಿಮಾಡಿಕೊಂಡಿದೆ".

ದೆಹಲಿಯಲ್ಲಿ ನಡೆದ ಆರು ಪಕ್ಷಗಳ ರಾಷ್ಟ್ರೀಯ ಸಮ್ಮೇಳನ ಅಂಗೀಕರಿಸಿದ 'ಪ್ರಸಕ್ತ ಪರಿಸ್ಥಿತಿ ಮತ್ತು ಹೋರಾಟಕ್ಕೆ ಕರೆ' ಎಂಬ ಪ್ರಮಾಣ ಪತ್ರ ಆರು ಪಕ್ಷಗಳ ರಂಗ ಎಂದು ಬಣ್ಣಿಸುವುದು ಸಂಪೂರ್ಣ ತಪ್ಪಾಗುತ್ತದೆಂದು ಇಲ್ಲಿ ಸ್ಪಷ್ಟವಾಗಿದೆ. ಎರಡನೆಯದಾಗಿ, ಭಾರತದ ಎಲ್ಲಾ ರಾಜ್ಯಗಳಲ್ಲೂ ಈ 'ಆರು ಪಕ್ಷಗಳ' ಅಸ್ತಿತ್ವಕ್ಕೆ ಬರಬಹುದೆಂಬ ಊಹೆಯನ್ನು ಸಮ್ಮೇಳನ ಎಂದೂ ಮಾಡಿರಲಿಲ್ಲ. ಈ ರೀತಿಯ ರಂಗಗಳನ್ನು ರೂಪಿಸಬೇಕೆಂದು ವಿರೋಧ ಪಕ್ಷಗಳು ತಮ್ಮತಮ್ಮ ರಾಜ್ಯ ಘಟಕಗಳಿಗೆ ನಿರ್ದೇಶಿಸುವ ಉದ್ದೇಶ ಕೂಡ ಇರಲಿಲ್ಲ. ಮೂರನೆಯದಾಗಿ ಈಗಾಗಲೇ ಕಳೆದ ಮೂರು ವರ್ಷಕ್ಕೂ ಮಿಕ್ಕಿ ಪ. ಬಂಗಾಲ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಎಡರಂಗ ಮತ್ತು ಅದರ ಸರಕಾರಗಳು ಅಸ್ತಿತ್ವದಲ್ಲಿವೆ ಮತ್ತು ಎಡ ಮತ್ತು ಪ್ರಜಾಪ್ರಭುತ್ವವಾದೀ ರಂಗದ ನೇತೃತ್ವದ ಸರಕಾರ ಕೇರಳದಲ್ಲಿ ಒಂದು ವರ್ಷದಿಂದ ಅಸ್ತಿತ್ವದಲ್ಲಿದೆ. ವಿವಿಧ ಲಕ್ಷಣಗಳಿಂದ ಕೂಡಿದ ರಾಜ್ಯಮಟ್ಟದ ರಂಗಗಳ ಈಗಾಗಲೇ ಅಸ್ತಿತ್ವದಲ್ಲಿರುವ ಸರಕಾರಗಳನ್ನು ವಿಸರ್ಜಿಸಿ ಹೊಸ ಆರು ಪಕ್ಷಗಳ ರಂಗದಲ್ಲಿ ಒಂದುಗೂಡಬೇಕೆಂದು ತಮ್ಮ ರಾಜ್ಯ ಘಟಕಗಳಿಗೆ ಆಜ್ಞಾಪಿಸುವ ಕನಸನ್ನು ಕೂಡ ಈ ಆರು ಪಕ್ಷಗಳ ಸಮನ್ವಯ ಸಮಿತಿಯ ಯಾವ ಪಕ್ಷಗಳೂ ಕಂಡಿರಲಿಲ್ಲ. ಆಯಾ ರಾಜ್ಯಗಳ ಪರಿಸ್ಥಿತಿಯ ಆಧಾರದ ಮೇಲೆ ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕ ಮುಂತಾದ ರಾಜ್ಯಗಳಲ್ಲೆಲ್ಲಾ ಐಕ್ಯಹೋರಾಟಕ್ಕೆ ಒಂದುಗೂಡಲು ಮುಂದೆ ಬರುವುದು ಕೂಡ ಬೇರೆಬೇರೆಯಾಗಬಹುದು ಎಂದು ಸ್ಪಷ್ಟಪಡಿಸಲಾಗಿತ್ತು. ಹಾಗಿರುವಾಗ ಕೇರಳ ಅಥವಾ ಪ. ಬಂಗಾಲ ಅಥವಾ ತ್ರಿಪುರಾ ರಾಜ್ಯಗಳ ನಮ್ಮ ಘಟಕಗಳು ಅಸ್ತಿತ್ವದಲ್ಲಿಲ್ಲದ ಆರು ಪಕ್ಷಗಳ ರಂಗವನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಪ್ರಶ್ನೆಯಾದರೂ ಎಲ್ಲಿ ಬರುತ್ತದೆ ?

ಕಾಂಗ್ರೆಸ್ (ಯು)ನತ್ತ ನಿಲುವು :

ಕೇರಳದಲ್ಲಿರುವ ಎಡ ಮತ್ತು ಪ್ರಜಾಪ್ರಭುತ್ವ ರಂಗ ಸರಕಾರದಲ್ಲಿ ಭಾಗವಹಿಸಿರುವ ಕಾಂಗ್ರೆಸ್ (ಯು) ಪಕ್ಷವು ಪ. ಬಂಗಾಲದ ಎಡರಂಗ ಸರ್ಕಾರದತ್ತ ಶತ್ರುತ್ವದ ಧೋರಣೆಯನ್ನು ಅನುಸರಿಸುತ್ತಿರುವುದು ಸರಿಯೇ ಎಂಬ ಪ್ರಶ್ನೆ ಬೇರೆಬೇರೆ ರೀತಿಯಲ್ಲಿ ಬರುತ್ತಿದೆ. ವಾಸ್ತವವಾಗಿ ಕಾಂಗ್ರೆಸ್ (ಯು) ಸಹಿತ ಭಾಗಿಯಾಗಿರುವ ಎಡ ಮತ್ತು ಪ್ರಜಾಪ್ರಭುತ್ವ ರಂಗ ಕೇರಳದಲ್ಲಿ ಅಸ್ತಿತ್ವಕ್ಕೆ ಬಂದಿರುವುದು ಅಖಿಲ ಭಾರತ ಮಟ್ಟದಲ್ಲಿನ ರಂಗ ಅಥವಾ ಕೂಟದ ಭಾಗವಾಗಿಯಲ್ಲ. ರಾಜಕೀಯ ಪಕ್ಷಗಳ ರಾಜ್ಯ ಘಟಕಗಳು ರಾಜ್ಯಮಟ್ಟದಲ್ಲಿ ಒಂದು ಒಪ್ಪಂದದ ಆಧಾರದ ಮೇಲೆ ಆ ರಂಗವನ್ನು ರಚಿಸಲಾಗಿದೆ. ರಾಜ್ಯ ಘಟಕಗಳಿ ಈ ಕಾರ್ಯಕ್ಕೆ ಸಮ್ಮತಿ ನೀಡಿವೆಯಷ್ಟೇ ಹೊರತು ಕೇರಳ ರೀತಿಯ ರಂಗಗಳ ಎಲ್ಲಾ ರಾಜ್ಯಗಳಲ್ಲೂ ರಚಿತವಾಗಬೇಕೆಂದು ಅಖಿಲ ಭಾರತ ಮಟ್ಟದ ಪಕ್ಷಗಳು ಯೋಚಿಸಿಲ್ಲ. ಹೀಗಿರಬೇಕಾದರೆ ನಮ್ಮ ಪೊಲಿಟ್‌ಬ್ಯೂರೋ ಸದಸ್ಯರಲ್ಲಿ "ಆರು ಪಕ್ಷಗಳ ಪರವಾಗಿರುವ ಒಂದು ಬಣ ಮತ್ತು ಅದಕ್ಕೆ ವಿರುದ್ಧವಾಗಿರುವ ಪಶ್ಚಿಮ ಬಂಗಾಲದ ಪೊಲಿಟ್ ಬ್ಯೂರೋ ಸದಸ್ಯರ ಒಂದು ಸಣ್ಣ ಗುಂಪು", ಈ ಎರಡು ಗುಂಪುಗಳ ಮಧ್ಯೆ ಇದೆ ಎಂದು ಹೇಳಲಾದ ಭಿನ್ನಾಭಿಪ್ರಾಯದ ಪ್ರಶ್ನೆಯಾದರೂ ಎಲ್ಲಿ ಬರುತ್ತದೆ ? ನಮ್ಮ ಪಕ್ಷದ ಪ್ರತಿಷ್ಠೆಯನ್ನು ಕುಂದಿಸುವ ಮತ್ತು ಪಕ್ಷದ ಗೌರವಕ್ಕೆ ಮಸಿಬಳಿಯುವ ಉದ್ದೇಶದಿಂದ ಹಬ್ಬಿಸಲಾದ 'ಒಳಜಗಳ'ಗಳ ಕತೆಯು ವಿಶೇಷ ವರದಿಗಾರನ ಊಹೆಮಾತ್ರದಿಂದ ಹುಟ್ಟಿದದ್ದಷ್ಟೇ.

ಎಡರಂಗಕ್ಕೆ ವಿರೋಧ :

ಕಾಂಗ್ರೆಸ್(ಯು) ಪಕ್ಷದ ಪಶ್ಚಿಮ ಬಂಗಾಳ ಘಟಕ ಹಾಗೂ ಅಲ್ಲಿಯ ನಾಯಕ ಪ್ರಿಯರಂಜನ್ ದಾಸ್ ಮುನ್ಶಿಯವರು ಒಂದೇ ಸಮನಾಗಿ ಎಡರಂಗ ಮತ್ತು ಅದರ ನೇತೃತ್ವದ ಸರಕಾರವನ್ನು ವಿರೋಧಿಸುತ್ತಿರುವುದು ನಮ್ಮ ದೇಶದಲ್ಲಿ ಪತ್ರಿಕೆಗಳನ್ನು ಓದುವ ಪ್ರತಿಯೊಬ್ಬರಿಗೂ ಅರಿವಿದೆ. ಆತ ತನ್ನ ಕಮ್ಯುನಿಸ್ಟ್ ವಿರೋಧಿ ಮತ್ತು ಎಡರಂಗ ವಿರೋಧಿ ರಾಜಕೀಯ ನಿಲುವಿನ ಪರವಾಗಿ ಲೇಖನಗಳನ್ನು ಬರೆಯುತ್ತಿರುವುದಲ್ಲದೇ, ಪ. ಬಂಗಾಳದಲ್ಲಿನ ಎಡರಂಗ ಸರಕಾರದ ವಿರುದ್ಧ ಚಳುವಳಿಗಳನ್ನು ಮತ್ತು ಹೋರಾಟಗಳನ್ನು ಸಂಘಟಿಸುತ್ತಿದ್ದಾರೆ. ನಾವು, ಪೊಲಿಟ್ ಬ್ಯೂರೋ ಮತ್ತು ಪ. ಬಂಗಾಳದ ಪಾರ್ಟಿಯ ಘಟಕದವರು, ನಮ್ಮ ಪಾರ್ಟಿಯನ್ನು ಮತ್ತು ಎಡರಂಗ ಸರಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಿಯರಂಜನ್‌ದಾಸ್ ಮುನ್ಶಿ ಮತ್ತು ಅವರ ಪಾರ್ಟಿಯವರ ದಾಳಿಯ ವಿರುದ್ಧ ಹೋರಾಡುವುದಲ್ಲದೇ ಬೇರೇನು ಮಾಡಬೇಕು? ಕಾಂಗ್ರೆಸ್(ಯು) ರಾಜ್ಯ ಘಟಕದೊಂದಿಗೆ ಮೈತ್ರಿ ಬೆಳೆಸಿಕೊಳ್ಳಬೇಕೆಂದು ಕೆಲವು ಪೊಲಿಟ್‌ಬ್ಯೂರೋ ಸದಸ್ಯರು, ಅದಕ್ಕೆ ವಿರುದ್ಧವಾಗಿ ಕೆಲವರು ಹೇಳುತ್ತಿದ್ದಾರೆ ಎಂಬ ಸುದ್ದಿ

(6ನೇ ಪುಟ ನೋಡಿ)

ಪಶ್ಚಿಮ ಬಂಗಾಳ ಭಾಷಾ ಧೋರಣೆಯ ವಿರುದ್ಧ

ರಾಜಕೀಯ ದುರುದ್ದೇಶದ ಚಳುವಳಿ

ಸುಬ್ರತ ಪಾಲ್

ಪಶ್ಚಿಮ ಬಂಗಾಳದ ಬುದ್ಧಿಜೀವಿಗಳ ಒಂದು ವಿಭಾಗ (ಅವರ ಸಂಖ್ಯೆ ಹಿಡಿಯಷ್ಟೇ ಇದ್ದರೂ) ಬ್ರಿಟಿಷರ ವಸಾಹತುಶಾಹೀ ಆಳ್ವಿಕೆಯ ಅಂತ್ಯದೊಂದಿಗೇ ನಿರ್ಧಾರವಾಗಿಬಿಟ್ಟಿದ್ದ ಒಂದು ವಿಷಯದ ಬಗ್ಗೆ ಈಗ 'ಧರ್ಮಯುದ್ಧ'ವನ್ನೇ ಸಾರಿದಂತಿದೆ. ಇವರ ಬೆನ್ನಹಿಂದೆ ಎಡರಂಗ ಸರ್ಕಾರಕ್ಕೆ ಸಾಧ್ಯವಾದ ರೀತಿಯಲ್ಲೆಲ್ಲಾ ಕಿರುಕುಳಕೊಡಬೇಕೆಂದೇ ಕಾಯುತ್ತಿರುವ ರಾಜಕೀಯ ಶಕ್ತಿಗಳೂ ಇವೆ. ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಇಂಗ್ಲೀಷನ್ನು ಕಡ್ಡಾಯ ವಿಷಯವಾಗಿ ಕಲಿಸುವುದನ್ನು ರದ್ದುಗೊಳಿಸಿರುವ ಕ್ರಮವನ್ನು ವಿರೋಧಿಸುವುದಕ್ಕಾಗಿ ಅವರು 'ಜೈಲಿಗೆ ಹೋಗುವ' ಗಂಭೀರ ಪ್ರತಿಜ್ಞೆಯನ್ನು ಕೈಗೊಂಡಿದ್ದಾರೆ.

ಈ ವಿಮರ್ಶಕರ ಎಡರಂಗ ಸರ್ಕಾರದ ವಿರುದ್ಧ ಬರುವ ಯಾವುದೇ ಟೀಕೆಯನ್ನು ಅದೇನೇ ಇರಲಿ, ಅದನ್ನು ಮಾಡಿದವರ ಸಂಖ್ಯೆ ಅದೆಷ್ಟೇ ಸಣ್ಣದಾಗಿರಲಿ ತಕ್ಷಣ ಪ್ರಸಾರ ಮಾಡಲು ಸದಾ ಸಿದ್ಧರಾಗಿರುವ ಏಕಸ್ವಾಮ್ಯ ಪತ್ರಿಕೆಗಳು, ರೇಡಿಯೋ ಹಾಗೂ ಟೆಲಿವಿಷನ್‌ನವರಿಂದ ಸಿಕ್ಕ ಸೇವೆಯಿಂದ ಮತ್ತಷ್ಟು ಉತ್ತೇಜಿತರಾಗಿದ್ದಾರೆ. ಚರ್ಚೆಗೆ ಅವಕಾಶವೇ ಇಲ್ಲದ ವಿಷಯವನ್ನು ಚರ್ಚಾಸ್ಪದವನ್ನಾಗಿ ಮಾಡಲಾಗಿದೆ. ಹಾಗೂ ಈ ಬುದ್ಧಿಜೀವಿಗಳನ್ನು ಪಶ್ಚಿಮ ಬಂಗಾಳದ ಶೈಕ್ಷಣಿಕ ಹಾಗೂ ಬೌದ್ಧಿಕ ಜೀವನದ ಮಹಾರಕ್ಷಕರೆಂಬಂತೆ ಚಿತ್ರಿಸಲಾಗುತ್ತಿದೆ.

ಪ್ರಾಥಮಿಕ ಹಂತದಿಂದಲೇ ಇಂಗ್ಲೀಷನ್ನು ಅನಿವಾರ್ಯ ಭಾಷೆಯಾಗಿ ಉಳಿಸಿಕೊಳ್ಳುವ ಪರವಾಗಿ ಈ ಶುಷ್ಕ ಪಂಡಿತರು ನೀಡುವ ವಾದಗಳಾದರೂ ಯಾವುವು ? ಅವರಲ್ಲಿ ಕೆಲವರು "ಇಂಗ್ಲೀಷ್ ಒಂದು ಬಹಳ ಅಭಿವೃದ್ಧಿ ಹೊಂದಿರುವ ಭಾಷೆ. ಭಾಷೆಯು ಜ್ಞಾನದ ವಾಹಕವಾದ್ದರಿಂದ ಆ ಭಾಷೆಯ ಮಹತ್ವವನ್ನು ಕಮ್ಮಿಗೊಳಿಸಿದರೆ ಅದರಿಂದ ಜನರ ನಡುವೆ ಜ್ಞಾನ ಪಸರಿಸಲು ಅಡ್ಡಿಯಾಗುತ್ತದೆ" ಎಂದು ಭಾವಿಸುತ್ತಾರೆ. ಅವರಿಗೆ ಭಾರತದ ಎಲ್ಲಾ ಪ್ರಾದೇಶಿಕ ಭಾಷೆಗಳೂ ಅಭಿವೃದ್ಧಿ ಹೊಂದದಿರುವ ಭಾಷೆಗಳು. ಆದ್ದರಿಂದ ಆ ಭಾಷೆಗಳನ್ನು ಅವನ್ನಾಡುವ ಜನರ ಮಧ್ಯೆ ಜ್ಞಾನದ ವಾಹಕಗಳಾಗಿ ಪರಿಗಣಿಸುವುದು ಸಾಧ್ಯವಿಲ್ಲ!

ಇನ್ನೊಬ್ಬರು "ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯ ಆಧುನಿಕ ಭಾರತೀಯ ಮನಸ್ಸನ್ನು ರೂಪಿಸಿದೆಯಾದ್ದರಿಂದ ಅದರ ಮಹತ್ವವನ್ನು ಕಡಿತಗೊಳಿಸುವುದು ಯಾರಿಗೂ ಸಾಧ್ಯವಿಲ್ಲ" ಎಂದು ಒತ್ತಿಹೇಳಬಯಸುತ್ತಾರೆ. ಇಂತಹ ಗುಲಾಮ ಪ್ರವೃತ್ತಿಯನ್ನು ಇನ್ನೊಬ್ಬರಲ್ಲಿ ಇನ್ನೂ ಸ್ಪಷ್ಟವಾಗಿ ಕಾಣಬಹುದು. ಬೇರೆ ಸಂದರ್ಭಗಳಲ್ಲಿ ರಾಷ್ಟ್ರೀಯ ಸಂಸ್ಕೃತಿಯ ಪೋಷಕರೆಂದು ಕರೆಸಿಕೊಳ್ಳಬಯಸುವ ಈ ಮಹಾನುಭಾವರು "ಇಂಗ್ಲೀಷ್ ಭಾಷೆ ರಾಷ್ಟ್ರಭಾಷೆಯಾಗಬೇಕು" ಎಂಬ ಕೇಳಿಕೆಯನ್ನೂ ಮುಂದಿಟ್ಟಿದ್ದಾರೆ!

ಕೆಲ ವಿಮರ್ಶಕರು ತಾವು 'ವೈಜ್ಞಾನಿಕ'ವಾಗಿ ಟೀಕೆ ಮಾಡುತ್ತೇವೆಂಬ ಸೋಗುಹಾಕುತ್ತಿದ್ದಾರೆ. ಇವರ ವೈಜ್ಞಾನಿಕತೆ ಎಷ್ಟು ಹಾಸ್ಯಾಸ್ಪದವಾಗಿ ಮುಂದುವರಿಯುತ್ತದೆಂದರೆ ಅಂತಿಮವಾಗಿ ಅವರು ಇಂಗ್ಲೀಷ್ ಪ್ರಥಮ ಭಾಷೆಯಾಗಬೇಕು; ಮಾತೃಭಾಷೆಯ ಮೂಲಕ ಉತ್ತಮ ಶಿಕ್ಷಣ ಪಡೆಯಲಾಗುವುದಿಲ್ಲ ಎಂದು ಸೂಚಿಸುತ್ತಾರೆ. ಮತ್ತೆ ಕೆಲ ಉದ್ರೇಕಾವಸ್ಥೆಯಲ್ಲಿರುವವರು ತರ್ಕ ಇತ್ಯಾದಿಗಳನ್ನು ಸ್ವಲ್ಪವೂ ಲೆಕ್ಕಿಸದೆ ತಪ್ಪು ತಪ್ಪಾದ ಉದ್ಧಾರಣೆಗಳನ್ನು, ತಪ್ಪಾದ ಹಾಗೂ ಕಲ್ಪಿತ ಆಧಾರಾಂಶಗಳನ್ನು ರಾಶಿರಾಶಿಯಾಗಿ ಪೂರೈಸುತ್ತಿದ್ದಾರೆ.

ಒಂದು ಪತ್ರಿಕೆಯ ಲೇಖನವೊಂದು ಪ್ರಾಥಮಿಕ ಹಂತದಲ್ಲಿ ಇಂಗ್ಲೀಷನ್ನು ಉಳಿಸಿಕೊಳ್ಳುವುದರ ಪರವಾಗಿ ವಾದಿಸಲು 1964–66ರ ಶಿಕ್ಷಣ ಆಯೋಗ (ಕೊಠಾರೀ ಆಯೋಗ)ದ ವರದಿಯನ್ನು ಆಧಾರವಾಗಿ ಕೊಡುತ್ತದೆ. ಆದರೆ ಈ ಆಯೋಗ ಸ್ಪಷ್ಟವಾಗಿ ಹೀಗೆ ಶಿಫಾರಸುಮಾಡಿದೆ–"ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳು ಕೇವಲ ಒಂದೇ ಭಾಷೆ ಕಲಿಯುತ್ತಾರೆ-ಮಾತೃಭಾಷೆಯನ್ನು. ಇಂಗ್ಲೀಷ್ ಕಲಿಕೆ 5ನೇ ತರಗತಿಗಿಂತ ಮೊದಲು ಆರಂಭವಾಗಬಾರದು; ಮಾತೃಭಾಷೆಯ ಮೇಲೆ ಸಾಕಷ್ಟು ಹಿಡಿತ ಸಾಧಿಸಿದ ಮೇಲೆ ಆರಂಭವಾಗಬೇಕು. 5ನೇ ತರಗತಿಗಿಂತ ಮೊದಲು ಇಂಗ್ಲೀಷ್ ಕಲಿಕೆ ಆರಂಭಿಸುವುದು ಸರಿಯಲ್ಲ".

ಎಡರಂಗ ಸರ್ಕಾರದ ಕೆಲವು ಶತ್ರುಗಳು ತಮ್ಮ ಮಿಥ್ಯಾಪವಾದವನ್ನು ಕೇವಲ ಇಂಗ್ಲೀಷ್‌ಗೇ ಮೀಸಲಿಟ್ಟಿಲ್ಲ. ಅವರು ಎಡರಂಗ ಸರ್ಕಾರದ ಶೈಕ್ಷಣಿಕ ಧೋರಣೆಯನ್ನು ಇಡಿಯಾಗಿ ಟೀಕಿಸುತ್ತಾರೆ. ರಾಜ್ಯಸರ್ಕಾರ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳನ್ನು 'ಪುಟ್ಟ ಕಮ್ಯುನಿಸ್ಟ'ರನ್ನಾಗಿ ಮಾಡಬಯಸುತ್ತಿದ್ದಾರೆ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಆದರೆ ಇದು ಸಂಪೂರ್ಣ ನಿರಾಧಾರವೆಂಬುದನ್ನು ಪ್ರಾಥಮಿಕ ಶಿಕ್ಷಣದ ಹೊಸ ಪಠ್ಯಕ್ರಮದ ಕಡೆಗೆ ದೃಷ್ಟಿಹರಿಸಿದವರಿಗೆ ತಿಳಿಯುತ್ತದೆ.

ಕಾಂಗ್ರೆಸ್ ಸರ್ಕಾರವೇ ಸ್ವಾತಂತ್ರ್ಯ ಸಿಕ್ಕಂದಿನಿಂದ ಬೇರೆ ಬೇರೆ ಸಂದರ್ಭಗಳಲ್ಲಿ ನೇಮಿಸಿದ ವಿವಿಧ ಶಿಕ್ಷಣ ಆಯೋಗಗಳ ಹಾಗೂ ಸಮಿತಿಗಳ ಉಪಯೋಗೀ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಬೇಕೆಂದಷ್ಟೇ ಎಡರಂಗ ಸರ್ಕಾರ ಯೋಜಿಸಿದೆ. ಕಾಂಗ್ರೆಸ್ ಸರ್ಕಾರಗಳು ಈ ಶಿಫಾರಸುಗಳನ್ನು ಕಾರ್ಯರೂಪಕ್ಕೆ ತರಲು ಯಾವುದೇ ಗಂಭೀರ ಪ್ರಯತ್ನವನ್ನೂ ಮಾಡಿರಲಿಲ್ಲ.

ಶಿಕ್ಷಣವನ್ನು ಜನಸಾಮಾನ್ಯರ ನಡುವೆ ತಗೊಂಡು ಹೋಗುವುದರಲ್ಲಿ ಎಡರಂಗ ಸರ್ಕಾರಕ್ಕೆ ಬಹಳ ಆಸಕ್ತಿಯಿದೆ. ಈ ನಿಲುವಿನಿಂದಾಗಿಯೇ ಪ್ರಾಥಮಿಕ ಹಂತದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ನಾಲ್ಕು ಲಕ್ಷದಷ್ಟು ಹೆಚ್ಚಿದೆ ಮತ್ತು ಮಾಧ್ಯಮಿಕ ಹಂತದಲ್ಲಿ ಒಂದೂವರೆ ಕೋಟಿಯಷ್ಟು.

1974ರಲ್ಲಿ ಆಗಿನ ಕಾಂಗ್ರೆಸ್ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ವಸ್ತುನಿಷ್ಠ ಹಾಗೂ ಆಧುನಿಕಗೊಳಿಸಲು ಪ್ರಾಥಮಿಕ ಶಿಕ್ಷಣ ಪಠ್ಯಕ್ರಮ ಸಮಿತಿಯನ್ನು ನೇಮಿಸಿತ್ತು. ಆದರೆ ಆ ಸರ್ಕಾರದ ಆಡಳಿತಾವಧಿಯಲ್ಲಿ ಈ ಸಮಿತಿ ತನ್ನ ಚಟುವಟಿಕೆ ಆರಂಭಿಸುವುದು ಸಾಧ್ಯವಾಗಲಿಲ್ಲ. 1977ರಲ್ಲಿ ಎಡರಂಗ ಸರ್ಕಾರ ಅಧಿಕಾರ ವಹಿಸಿಕೊಂಡು ಶೈಕ್ಷಣಿಕ ಕ್ಷೇತ್ರದಲ್ಲಿ ಜನಸಾಮಾನ್ಯರಿಗೆ ಸಹಾಯಕವಾಗುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಾಗ ಈ ಸಮಿತಿಯನ್ನು ಪುನಶ್ಚೇತನಗೊಳಿಸಲಾಯಿತು. ಮಾತ್ರವಲ್ಲ ಅದನ್ನು ಪ್ರಜಾಸತ್ತಾತ್ಮಕಗೊಳಿಸಲು ವಿಸ್ತರಿಸಿ ಪ್ರಖ್ಯಾತ ಶಿಕ್ಷಣ ತಜ್ಞರನ್ನು, ಪ್ರಾಥಮಿಕ ಶಿಕ್ಷಣದ ಪರಿಣತರನ್ನು, ಪ್ರಾಥಮಿಕ ಶಾಲೆಗಳು ಹಾಗೂ ಪ್ರಾಥಮಿಕ ಶಿಕ್ಷಕರ ತರಬೇತಿ ಕಾಲೇಜುಗಳ ಪ್ರತಿನಿಧಿಗಳನ್ನು ಹಾಗೂ ರಾಜ್ಯದ ಎಲ್ಲಾ ಪ್ರಾಥಮಿಕ ಶಿಕ್ಷಕರ ಸಂಘಗಳ ಪ್ರತಿನಿಧಿಗಳನ್ನೂ ಸೇರಿಸಲಾಯಿತು.

ಎರಡು ವರ್ಷಗಳ ತೀವ್ರ ಪ್ರಯತ್ನಗಳ ನಂತರ ಆ ಸಮಿತಿ ಪ್ರಾಥಮಿಕ ಶಿಕ್ಷಣಕ್ಕಾಗಿ ಒಂದು ಪಠ್ಯಕ್ರಮವನ್ನು ಶಿಫಾರಸುಮಾಡಿತು. ಈ ಪಠ್ಯಕ್ರಮ ತಯಾರಿಸುವಾಗ ಮಗುವಿನ ಸರ್ವತೋಮುಖ ಬೆಳವಣಿಗೆಯ ಅವಶ್ಯಕತೆ ಬದಲಾಗುತ್ತಿರುವ ಸಮಾಜದ ಅಗತ್ಯಕ್ಕನುಗುಣವಾಗಿ ಇರುವಂತೆ ನೋಡಿಕೊಳ್ಳಲಾಗಿತ್ತು. ಸಮಿತಿಯ ಸದಸ್ಯರು ಅದರಿಂದ ಹನ್ನೊಂದನೇ ವಯಸ್ಸಿನ ವಯೋಗುಂಪಿಗೆ ಸೇರಿದ ಮಕ್ಕಳು ಅದರಲ್ಲೂ ವಿಶೇಷವಾಗಿ ದುರ್ಬಲ ವಿಭಾಗಗಳಿಗೆ ಸೇರಿದ ಮಕ್ಕಳನ್ನು ತಮ್ಮ ಗಮನದಲ್ಲಿಟ್ಟುಕೊಂಡಿದ್ದರು. ಹೊಸ ಪಠ್ಯಕ್ರಮದ ಎರಡು ಪ್ರಮುಖ ಅಂಶಗಳೆಂದರೆ :

1. ಶಿಕ್ಷಣದ ಬಗ್ಗೆ ಅತ್ಯಾಧುನಿಕ ಪರಿಕಲ್ಪನೆಗಳನ್ನು ಅದು ಒಳಗೊಂಡಿದೆ: ಮಗು ಹಾಗೂ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಪ್ರಾಥಮಿಕ ಶಿಕ್ಷಣ ಪ್ರಭಾವಶಾಲೀ ಉಪಕರಣ ಎಂದು ಪರಿಗಣಿಸಲಾಗಿದೆ.

2. ವಿವಿಧ ಶೈಕ್ಷಣಿಕ ಆಯೋಗಗಳ ವಿಶೇಷವಾಗಿ ಕೊಠಾರೀ ಆಯೋಗದ ಮಹತ್ವಪೂರ್ಣ ಶಿಫಾರಸುಗಳನ್ನು ಅಂಗೀಕರಿಸಲಾಗಿದೆ.

ಸಮಿತಿಯು ಪ್ರಾಥಮಿಕ ಹಂತದಲ್ಲಿ ಶಿಕ್ಷಣಕೊಡಲು ಎಲ್ಲಾ ವಿಷಯಗಳಲ್ಲಿ ಹೊಸ ಪಠ್ಯಪುಸ್ತಕಗಳನ್ನು ಬರೆಯಬೇಕೆಂದು ಶಿಫಾರಸುಮಾಡಿದೆ. ಪುಸ್ತಕ ಬರೆಯುವ ಬಗ್ಗೆ ಒಂದು ನಿರ್ದಿಷ್ಟ ವಿಧಾನವನ್ನೂ ಅದು ಕೊಟ್ಟಿದೆ.

ಪ್ರಾಥಮಿಕ ಹಂತದಲ್ಲಿ ಇಂಗ್ಲೀಷನ್ನು ಕಡ್ಡಾಯವಾಗಿ ಕಲಿಸುವುದನ್ನು ರದ್ದುಗೊಳಿಸಬೇಕೆಂದು ಸಮಿತಿ ಸುಸ್ಪಷ್ಟವಾಗಿ ಶಿಫಾರಸುಮಾಡಿದೆ. ಇದು ಮಕ್ಕಳಿಗೆ ಮಾತೃಭಾಷೆಯನ್ನು ಮಾತ್ರ ಕಲಿಸಬೇಕೆಂದು ಶಿಕ್ಷಣವೇತ್ತರು ಸಾರ್ವತ್ರಿಕವಾಗಿ ಸ್ವೀಕರಿಸಿರುವ ತೀರ್ಮಾನಕ್ಕೆ ಅನುಗುಣವಾಗಿಯೇ ಇದೆ.

ಪ್ರಾಥಮಿಕ ಹಂತದಲ್ಲಿ ಭಾಷಾ ಕಲಿಕೆಯ ಬಗ್ಗೆ ಪ್ರಾಥಮಿಕ ಶಿಕ್ಷಣ ಪಠ್ಯಕ್ರಮ ಸಮಿತಿ ಮಾಡಿರುವ ಈ ಶಿಫಾರಸು ನಂತರದ ಹಂತದಲ್ಲಿ ಎರಡನೇ ಭಾಷೆಯನ್ನು ಕಲಿಸುವುದರ ಮಹತ್ವವನ್ನೇನೂ ಕಡೆಗಣಿಸಿಲ್ಲ. ಮಕ್ಕಳು ತಮ್ಮ ಮಾತೃಭಾಷೆಯ ಮೇಲೆ ಒಮ್ಮೆ ಒಳ್ಳೆಯ ಹಿಡಿತ ಸಾಧಿಸಿದರೆಂದರೆ ಆಮೇಲೆ ಅವರು ಸುಲಭವಾಗಿ ಇಂಗ್ಲೀಷನ್ನು ಅಥವಾ ಬೇರೆ ವಿದೇಶೀ ಭಾಷೆಯನ್ನು ಕಲಿಯಬಲ್ಲರು.

ಸಮಿತಿಯ ಈ ಶಿಫಾರಸನ್ನೇ ಸರಕಾರ ಕಾರ್ಯರೂಪಕ್ಕೆ ತರಬಯಸುತ್ತಿದೆ. ಇದನ್ನೇ ಬುದ್ಧಿಜೀವಿಗಳೆಂದು ಕರೆಸಿಕೊಳ್ಳುವವರು ವಿರೋಧಿಸುತ್ತಿರುವುದು.

ಇದಕ್ಕೆ ಸಂಬಂಧಪಟ್ಟ ಇನ್ನೂ ಕೆಲವು ವಾಸ್ತವಾಂಶಗಳನ್ನು ಗಮನಿಸಬೇಕು. ಭಾರತದ 22 ರಾಜ್ಯಗಳು ಹಾಗೂ ಒಂಬತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಾಗಾಲ್ಯಾಂಡ್‌ನಲ್ಲಿ ಮಾತ್ರ ಮೊದಲನೇ ತರಗತಿಯಿಂದ ಇಂಗ್ಲೀಷನ್ನು ಕಡ್ಡಾಯವಾಗಿ ಬೋಧಿಸಲಾಗುತ್ತಿದೆ. ಆರು ರಾಜ್ಯಗಳು ಹಾಗೂ ನಾಲ್ಕು ಕೇಂದ್ರಾಡಳಿತ ಪ್ರದೇಶಗಳಲ್ಲಿ ಇಂಗ್ಲೀಷನ್ನು ಪ್ರಾಥಮಿಕ ಹಂತದಲ್ಲಿ ಎರಡನೇ ಭಾಷೆಯಾಗಿ ಬೋಧಿಸಲಾಗುತ್ತಿಲ್ಲ. ಪ್ರಾಥಮಿಕ ಹಂತದಲ್ಲಿ ಇಂಗ್ಲೀಷ್ ಕಲಿಸುತ್ತಿರುವ 15 ರಾಜ್ಯಗಳಲ್ಲಿ ಎಂಟರಲ್ಲಿ ಇಂಗ್ಲೀಷ್ ಬೋಧನೆ 5ನೇ ಮತ್ತು 6ನೇ ತರಗತಿಯಿಂದ ಮಾತ್ರ ಆರಂಭವಾಗುತ್ತದೆ. ಇಂಗ್ಲೀಷ್ ಬೋಧನೆಯನ್ನು ಒಂದೇ ಹಂತದಿಂದ ಆರಂಭಿಸುವ ತಮಿಳುನಾಡು ಹಾಗೂ ಕೇರಳದೊಂದಿಗೆ ಹೋಲಿಸಿದಾಗ ಪಶ್ಚಿಮ ಬಂಗಾಳದಲ್ಲಿ ಇಂಗ್ಲೀಷ್ ಬೋಧನೆಯ ಕಾಲಾವಧಿಯು ಅನುಪಾತ ಹೆಚ್ಚಿದೆ. ಇದಕ್ಕೆ ಕಾರಣ ವಸಾಹತುಶಾಹಿ ಪರಂಪರಾಗತ ಹೊರೆ. ಇದನ್ನೇ ಎಡರಂಗ ಸರ್ಕಾರದ ಟೀಕಾಕಾರರು ವೈಭವೀಕರಿಸುತ್ತಿದ್ದಾರೆ.

ಪಶ್ಚಿಮ ಬಂಗಾಳ ಸರ್ಕಾರದ ಶಿಕ್ಷಣನೀತಿ ಈ ಅಸಮತೋಲನವನ್ನು ಸರಿಪಡಿಸಿ ಮಾತೃಭಾಷಾ ಬೋಧನೆಗೆ ಪ್ರಥಮ ಸ್ಥಾನಕೊಡಲು ಸಾಧ್ಯವಾಗುವಂತೆ ರೂಪಿತವಾಗಿದೆ. ಸರ್ಕಾರದ ವಿರೋಧಿಗಳು ಪ್ರಚಾರಮಾಡುವಂತೆ ಇಂಗ್ಲೀಷ್ ಭಾಷೆಯ ಬೋಧನೆಯನ್ನೇ ರದ್ದುಮಾಡುವುದು ಸರಕಾರದ ಇಚ್ಛೆಯಲ್ಲ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸುರವರು ಇದನ್ನು ಪದೇಪದೇ ಒತ್ತಿ ಹೇಳಿದ್ದಾರೆ.

ಜನವರಿ 29ರಂದು ಅವರು ಒಂದು ಸಮಾರಂಭದಲ್ಲಿ ರಾಜ್ಯಸರ್ಕಾರದ ಶಿಕ್ಷಣನೀತಿಯ ಹಿಂದಿರುವ ಉದ್ದೇಶಗಳನ್ನು ಸ್ಪಷ್ಟಗೊಳಿಸುತ್ತಾ ಕೆಲವು ಬುದ್ಧಿಜೀವಿಗಳು ಜನರನ್ನು ಗೊಂದಲಕ್ಕೀಡುಮಾಡಲು, ತಪ್ಪುದಾರಿಗೆಳೆಯಲು ಪ್ರಯತ್ನಿಸುತ್ತಿದ್ದಾರೆ ಎಂದಿದ್ದಾರೆ. "ಇದರ ಹಿನ್ನೆಲೆಯಲ್ಲಿ ಉದ್ದೇಶಪೂರಿತ ರಾಜಕೀಯವಿದೆಯೋ ಎಂದು ನನಗೆ ಖಚಿತವಾಗಿಗೊತ್ತಿಲ್ಲ" ಎಂದ ಅವರು ಇಂಗ್ಲೀಷನ್ನು ರದ್ದುಗೊಳಿಸಲಾಗುತ್ತಿಲ್ಲ ಎಂದರು. ಮೂಲಭೂತ ಉದ್ದೇಶ ಮಾತೃಭಾಷೆಯ ಮೂಲಕ ಬೋಧಿಸುವುದರ ಮಹತ್ವವನ್ನು ಒತ್ತಿ ಹೇಳುವುದೇ ಆಗಿದೆಯೆಂದು ಅವರು ಹೇಳಿದ್ದಾರೆ. ಉನ್ನತ ಶಿಕ್ಷಣದಲ್ಲಿ ಮೇಲಿನ ಸ್ಥಾನಗಳನ್ನು ಪಡೆಯಲು ಇಂಗ್ಲೀಷ್ ಮಾಧ್ಯಮ ಮಾತ್ರ ಸಹಾಯಕವಾಗುವುದೆಂಬ ಭಾವನೆಯನ್ನು ಅವರು ಒಪ್ಪಲಿಲ್ಲ.

[ಮುಂದುವರೆಯುವುದು]

ಸ್ವಾತಂತ್ರ್ಯ ಸಂಗ್ರಾಮದ ಅಪ್ರತಿಮ ಸೇನಾನಿ

ಶಹೀದ್ ಚಂದ್ರಶೇಖರ್ ಆಜಾದ್

(ಹಿಂದಿನ ಸಂಚಿಕೆಯಿಂದ)

ಬಿಸ್ಮಿಲ್ ಮತ್ತಿತರ ಮುಂದಾಳುಗಳ ಮರಣಾನಂತರ ಸಂಸ್ಥೆಯ ಜವಾಬ್ದಾರಿ ಆಜಾದ್‌ರ ಹೆಗಲ ಮೇಲೆ ಬಿದ್ದಿತು. ಭಗವಾನ್ ದಾಸ್ ಮಾಹೋರ್, ಸದಾಶಿವ ಮಲಕಾಪೂರಕರ ಮೊದಲಾದವರ ಸಹಕಾರದಿಂದ ಸಂಸ್ಥೆಯನ್ನು ಬಲಪಡಿಸಲು ಕಂಕಣಬದ್ಧರಾದರು. ದೇಶದ ಸ್ವಾತಂತ್ರ್ಯಕ್ಕಾಗಿ ಸರ್ವತ್ಯಾಗಕ್ಕೂ ಸಿದ್ಧರಾದ ಕಿಶೋರರ ಪಡೆ ಸಿದ್ಧವಾಯಿತು. ಈ ಸಂದರ್ಭದಲ್ಲೇ ಆಜಾದ್ ಮತ್ತು ಭಗತ್‌ಸಿಂಗರ ಮಿಲನವಾಯಿತು. ಭಗತ್‌ಸಿಂಗ್ ಪಂಜಾಬಿನ 'ನೌಜವಾನ್ ಭಾರತ ಸಭಾ' ಸಂಸ್ಥೆಯ ಮುಂದಾಳು. ಭಗತ್‌ಸಿಂಗರ ಬೌದ್ಧಿಕ ನಿಲುವು, ಆಜಾದ್‌ರ ಕಾರ್ಯಕ್ಷಮತೆ ಅದ್ಭುತ ಹೊಂದಾಣಿಕೆಯಾಯಿತು. ಆಜಾದ್‌ರ ಮಿಂಚಿನಂತಹ ವ್ಯಕ್ತಿತ್ವ ಭಗತ್‌ಸಿಂಗರನ್ನು ತೀವ್ರ ಆಕರ್ಷಿಸಿತು. ಬ್ರಿಟಿಷರಿಂದ ಸ್ವಾತಂತ್ರ್ಯಗಳಿಸಿದ ನಂತರ ಶೋಷಣೆ, ಅಸಮಾನತೆ ಇಲ್ಲದ ಸಮಾಜಕಟ್ಟಲು ಈ ಯುವ ಕ್ರಾಂತಿಕಾರಿಗಳು ಆತುರದಿಂದಿದ್ದರು. ರಶಿಯದ ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರಭಾವ ಕ್ರಾಂತಿಕಾರಿಗಳ ಮೇಲೆ ಅಗಾಧ ಪರಿಣಾಮ ಬೀರಿತ್ತು. ಸಮಾಜವಾದಿ ಪರಿಕಲ್ಪನೆಗೆ ಅನುಗುಣವಾಗಿ ಸಂಸ್ಥೆಯ ಹೆಸರನ್ನು 'ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ (ಎಚ್.ಎಸ್.ಆರ್.ಎ.)ಎಂದು ಬದಲಾವಣೆ ಮಾಡಲಾಯಿತು.

1926ರಲ್ಲಿ ಲಾರ್ಡ್ ಇರ್ವಿನ್ ವೈಸರಾಯನಾಗಿ ಭಾರತಕ್ಕೆ ಬಂದ. ಭಾರತದಲ್ಲಿ ಭುಗಿಲೆದ್ದಿದ್ದ ಹೋರಾಟಕ್ಕೆ ತಣ್ಣೀರೆರಚುವ ಉದ್ದೇಶದಿಂದ ಯೋಜನೆ ಪ್ರಾರಂಭವಾಯಿತು. 'ಭಾರತದ ಪ್ರಸಕ್ತ ಪರಿಸ್ಥಿತಿಯನ್ನು ಅಭ್ಯಾಸಮಾಡಿ ಅವಶ್ಯವಾದ ರಾಜಕೀಯ ಸುಧಾರಣೆಗಳನ್ನು ಸೂಚಿಸಲು ಜಾನ್ ಸೈಮನ್‌ರ ನೇತೃತ್ವದಲ್ಲಿ ಸೈಮನ್ ಕಮಿಷನ್' ನಿಯಮಿಸಲ್ಪಟ್ಟಿತು. ಈ ಸಮಿತಿಯಲ್ಲಿ ಭಾರತೀಯನೊಬ್ಬನೂ ಇರಲಿಲ್ಲ. ಈ ಸಮಿತಿಯನ್ನು ಧಿಕ್ಕರಿಸಲು ದೇಶ ಸಿದ್ಧವಾಗತೊಡಗಿತು. ಸೈಮನ್ ಕಮಿಷನ್‌ನಲ್ಲಿ ಒಂದು ಸ್ಥಾನ ಗಿಟ್ಟಿಸಲು ಹವಣಿಸಿದ ಕಾಂಗ್ರೆಸ್ ತನ್ನ ಯತ್ನ ವಿಫಲವಾದ ನಂತರ ಬಹಿಷ್ಕಾರದಲ್ಲಿ ಜೊತೆಗೂಡಿತು. 1928 ಅಕ್ಟೋಬರ್ 30ರಂದು ಸೈಮನ್ ನಿಯೋಗ ಲಾಹೋರ್‌ಗೆ ಬಂದಿತು. ಸೈಮನ್ ಕಮಿಷನ್ ವಿರೋಧಿ ಮತಪ್ರದರ್ಶನವನ್ನು ಲಾಹೋರ್‌ನ ನೌಜವಾನ್ ಭಾರತ ಸಭೆ ಏರ್ಪಡಿಸಿತ್ತು. ಈ ಮೆರವಣಿಗೆಯ ನೇತೃತ್ವವನ್ನು ಲಾಲಾಲಜಪತರಾಯರು ವಹಿಸಿದ್ದರು. "ಸೈಮನ್ ಹಿಂತಿರುಗಿ" (SIMON GO BACK) ಎಂದು ಮಾರ್ಧನಿಸುತ್ತಿದ್ದ ಪ್ರಚಂಡ ಮೆರವಣಿಗೆ ಶಾಂತವಾಗಿ ಸಾಗುತ್ತಿದ್ದಾಗ ಪೋಲೀಸರು ಪ್ರಚೋದಿಸಿ ಲಾಠೀ ಚಾರ್ಜ್ ಮಾಡಿದರು. ಲಾಲಾಜಿ ಲಾಠೀ ಪೆಟ್ಟಿನಿಂದ ಗಾಯಗೊಂಡು ನಂತರ (ನವೆಂಬರ್ 17) ನಿಧನರಾದರು.

ಲಾಲಾಜಿ ಕೊಲೆಗೆ ಸೇಡುತೀರಿಸಿಕೊಳ್ಳಲು ಕ್ರಾಂತಿಕಾರಿಗಳು ನಿಶ್ಚಯಿಸಿದರು. ಲಾಲಾಜಿಯವರ ಮರಣವಾದ ಕೆಲವು ದಿನಗಳ ನಂತರ ಆಜಾದ್‌ರು ಲಾಹೋರಿಗೆ ಬಂದರು. ಕೈಯ್ಯಲ್ಲೊಂದು ಪೆಟ್ಟಿಗೆ ಅದರಲ್ಲಿ ಮೌಜರ್ ಪಿಸ್ತೂಲು ಮತ್ತು ರಿವಾಲ್ವರುಗಳು. 1928 ಡಿಸೆಂಬರ್ 10 ರಂದು ಎಚ್.ಎಸ್.ಆರ್.ಎ.ನ ಕೇಂದ್ರ ಸಮಿತಿ ಸಭೆ ನಡೆದು ಲಾಲಾಜಿ ಕೊಲೆಗೆ ಕಾರಣನಾದ ಸ್ಯಾಂಡರ್ಸ್‌ನನ್ನು ಕೊಲೆಮಾಡಲು ತೀರ್ಮಾನಿಸಲಾಯಿತು. ಆಜಾದ್, ಭಗತ್‌ಸಿಂಗ್, ರಾಜಗುರು ಮತ್ತು ವಿಜಯಕುಮಾರಸಿನ್ಹ ಮೊದಲಾದವರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡರು. ಡಿಸೆಂಬರ್ 17ರಂದು ಹಾಡೇಹಗಲಿನಲ್ಲಿ ಪೋಲೀಸ್ ಠಾಣೆಯ ಎದುರು ಸ್ಯಾಂಡರ್ಸ್‌ನನ್ನು ಮುಗಿಸಲಾಯಿತು. ಸೇಡು ತೀರಿತ್ತು. ಕ್ರಾಂತಿಕಾರಿಗಳನ್ನು ಹಿಂಬಾಲಿಸಿದ ಚನ್ನನ್‌ಸಿಂಗ್ ಎಂಬ ಕಾನ್‌ಸ್ಟೇಬಲ್‌ನನ್ನು ಹಿಂತಿರುಗಲು ಆಜಾದ್ ತಿಳಿಸಿದರು. ಕಿವಿಗೊಡದ ಅವನನ್ನು ಸ್ತಬ್ಧನನ್ನಾಗಿಸಿದರು. ಈ ರೀತಿ ಯಾವಾಗಲೂ ಬೆಂಗಾವಲಾಗಿ ನಿಲ್ಲುತ್ತಿದ್ದರು ಭೈಯಾ ಆಜಾದ್. ನಂತರ ಭಗತ್‌ಸಿಂಗರು ವೇಷ ಬದಲಿಸಿ ಪ್ರಥಮದರ್ಜೆ ಪ್ರಯಾಣಿಕರಾಗಿ ಲಾಹೋರ್ ಬಿಟ್ಟು ತೆರಳಿದರು. ಆಜಾದ್‌ರು ಹಾಡುವ ಸಾಧುವಿನ ವೇಷದಲ್ಲಿ ಪಾರಾದರು.

ಚಟುವಟಿಕೆಗಳನ್ನು ತೀವ್ರಗೊಳಿಸುವ ಉದ್ದೇಶದಿಂದ ಕಲಕತ್ತೆಯಿಂದ ಬಾಂಬ್ ತಯಾರಿಸುವ ಕಲೆಯಲ್ಲಿ ಪರಿಣಿತ ಜತೀನ್‌ದಾಸರನ್ನು ಬಾಂಬ್ ತಯಾರಿಸಲು ಕರೆತರಲಾಯಿತು. ಹಲವೆಡೆ ಬಾಂಬ್ ಫ್ಯಾಕ್ಟರಿಗಳನ್ನು ಪ್ರಾರಂಭಿಸಲಾಯಿತು.

'ತಾವು ಕೇವಲ ಭಯೋತ್ಪಾದಕರಲ್ಲ; ಸ್ವಾತಂತ್ರ್ಯಕ್ಕಾಗಿ ಹಂಬಲಿಸುವ ಕ್ರಾಂತಿಕಾರಿಗಳು; ನಮಗೊಂದು ನಿರ್ದಿಷ್ಟ ಸಿದ್ಧಾಂತವಿದೆ' ಎಂಬ ವಿಚಾರಗಳನ್ನು ಪ್ರಚುರಪಡಿಸಲು ಆಜಾದ್ ಮತ್ತಿತರರು ತೀರ್ಮಾನಿಸಿದರು. ಕಾರ್ಯಕ್ರಮವೊಂದನ್ನು ರೂಪಿಸಲಾಯಿತು. ಭಗತ್‌ಸಿಂಗ್ ಮತ್ತು ಭಟುಕೇಶ್ವರದತ್‌ರು ಕೇಂದ್ರ ವಿಧಾನಸಭೆಯಲ್ಲಿ ಬಾಂಬ್ ಸ್ಫೋಟಿಸಿ, ಕರಪತ್ರಗಳನ್ನು ಎರಚಿ ಜನತೆಯ ಗಮನ ಸೆಳೆಯಬೇಕೆಂದು ತೀರ್ಮಾನಿಸಲಾಯಿತು. ಆಜಾದ್‌ರು ಇವರಿಗೆ ರಕ್ಷಣೆಕೊಟ್ಟು ಪಾರುಮಾಡಬೇಕೆಂದೂ ತೀರ್ಮಾನವಾಯಿತು. ಭಗತ್‌ಸಿಂಗ್‌ರು ಇದಕ್ಕೆ ಒಪ್ಪಲಿಲ್ಲ. ಬಂಧಿತರಾಗಿ ನ್ಯಾಯಾಲಯದ ಮುಂದೆ ತಮ್ಮ ಧೋರಣೆಗಳನ್ನು ಪ್ರಚುರಪಡಿಸಬೇಕೆಂದು ವಾದಿಸಿದರು. ಅದರಂತೆ ಏಪ್ರಿಲ್ 8, 1929ರಂದು ಕೇಂದ್ರ ವಿಧಾನಸಭೆಯಲ್ಲಿ ಸಾರ್ವಜನಿಕ ಸರಕ್ಷಣಾ ಬಿಲ್ ಮಂಡಿಸುತ್ತಿದ್ದಾಗ ಬಾಂಬನ್ನು ಸ್ಫೋಟಿಸಲಾಯಿತು. ಆಜಾದ್‌ರ ಗೂಢನಾಮ ಕರ್ತಾರಸಿಂಗ ಎಂಬ ಹೆಸರಿನಿಂದ ಪ್ರಕಟಿತಗೊಂಡ ಕರಪತ್ರಗಳನ್ನು ಎಸೆಯಲಾಯಿತು. ಭಗತ್‌ಸಿಂಗ್, ಭಟುಕೇಶ್ವರದತ್‌ರು ಸ್ವಯಂ ಬಂಧಿತರಾದರು. ನಂತರ ಸ್ಯಾಂಡರ್ಸ್ ಕೊಲೆ ಮೊಕದ್ದಮೆಯಲ್ಲಿ ಆಪಾದಿತರಾಗಿದ್ದ ಸುಖದೇವ್, ರಾಜಗುರು ಇವರು ಬಂಧಿಸಲ್ಪಟ್ಟರು. ಭಗತ್‌ಸಿಂಗರು ಈ ಕೊಲೆ ಮೊಕದ್ದಮೆಯಲ್ಲಿ ಪೋಲೀಸರಿಗೆ ಬೇಕಾದ ವ್ಯಕ್ತಿಯಾಗಿದ್ದರು. ದೀರ್ಘ ವಿಚಾರಣೆ ನಡೆದು ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಈ ಮೂವರಿಗೆ ಮರಣದಂಡನೆ ವಿಧಿಸಲಾಯಿತು.

ವಿ. ಪಿ. ಕುಲಕರ್ಣಿ

ವಿಚಾರಣೆ ನಡೆಯುತ್ತಿರುವಾಗ ಭಗತ್‌ಸಿಂಗರು ದೀರ್ಘ ಹೇಳಿಕೆ ನೀಡಿದರು. ಈ ಹೇಳಿಕೆ ಇತಿಹಾಸ ಪ್ರಸಿದ್ಧವಾಗಿದೆ. "ಶಾಸನ ಸಭೆಯಲ್ಲಿದ್ದ ಯಾವ ವ್ಯಕ್ತಿಯ ಮೇಲೂ ನಮ್ಮ ವೈಯಕ್ತಿಕ ದ್ವೇಷ ಇರಲಿಲ್ಲ. ಇಡೀ ಮಾನವ ಜೀವರಾಶಿಯನ್ನು ಪವಿತ್ರವಾದುದೆಂದು ನಾವು ಪರಿಗಣಿಸುತ್ತೇವೆ".

"ಕ್ರಾಂತಿಯ ನೈಜ ಅರ್ಥ ಸಮಾಜ ಪದ್ಧತಿಯಲ್ಲಿ ಬದಲಾವಣೆ ಎಂದು. ಕ್ರಾಂತಿ ಮಾನವ ಸಮೂಹದ ಸ್ವಾಭಾವಿಕ ಹಕ್ಕು. ಸ್ವಾತಂತ್ರ್ಯ ಮಾನವನ ಜನ್ಮಸಿದ್ಧ ಹಕ್ಕು. ಈ ಧ್ಯೇಯಕ್ಕಾಗಿ ಎಷ್ಟೋ ಕಷ್ಟಗಳನ್ನು, ತ್ಯಾಗವನ್ನು ಸಹಿಸಬೇಕಾದರೂ ನಾವು ಸಿದ್ಧ. ಕ್ರಾಂತಿಯ ಬಲಿವೇದಿಕೆಯ ಮೇಲೆ ನಮ್ಮ ಯೌವ್ವನವನ್ನು ಸುಗಂಧಧೂಪದಂತೆ ಉರಿಸುತ್ತಿದ್ದೇವೆ. ಕ್ರಾಂತಿಯ ಬರುವನ್ನೇ ನಾವು ಎದಿರು ನೋಡುತ್ತಿದ್ದೇವೆ.

"ಕ್ರಾಂತಿಯು ಚಿರಾಯುವಾಗಲಿ". ಎಂದು ಹೇಳಿಕೆ ನೀಡಿದರು.

ಭಗತ್‌ಸಿಂಗ್ ಮತ್ತು ಇತರರನ್ನು ಬಿಡುಗಡೆಗೆ ಯತ್ನ ನಡೆಯಿತಾದರೂ ಫಲದೊರೆಯಲಿಲ್ಲ. ವೈಸರಾಯ್ ಪ್ರಯಾಣಿಸುತ್ತಿದ್ದ ರೈಲಿನ ಕೆಳಗೆ ಬಾಂಬನ್ನಿಟ್ಟು ಅವನನ್ನು ಮುಗಿಸಿಬಿಡಲು ಪ್ರಯತ್ನ ನಡೆಯಿತಾದರೂ ವಿಫಲವಾಯಿತು. ಈ ಸಂದರ್ಭದಲ್ಲಿ ಲಾಹೋರ್ ಕಾಂಗ್ರೆಸ್ ಅಧಿವೇಶನ ನಡೆಯಿತು. ಅಧಿವೇಶನದ ಆರಂಭದಲ್ಲೆ ಸ್ವತಃ ಗಾಂಧೀಯವರೇ ವೇದಿಕೆಯ ಮೇಲೆ ಎದ್ದುನಿಂತು ಒಂದು ನಿರ್ಣಯ ಮಂಡಿಸುತ್ತಾ, ವೈಸರಾಯರ ಮೇಲೆ ಬಾಂಬ್ ಪ್ರಯೋಗವನ್ನು ಖಂಡಿಸಿ, ವೈಸ್ರಾಯರಿಗೆ ತಮ್ಮ ದುಃಖವನ್ನು ವ್ಯಕ್ತಪಡಿಸಿ ಅವರಿಗೆ ಯಾವ ಅಪಾಯವೂ ಆಗದಿದ್ದುದಕ್ಕೆ ಪರಮಾತ್ಮನಿಗೆ ಹೃತ್ಪೂರ್ವಕ ಧನ್ಯವಾದಗಳನ್ನರ್ಪಿಸಿದರು. ಸಭೆಯಲ್ಲಿದ್ದ ಸದಸ್ಯರನ್ನು ಪ್ರಾರ್ಥಿಸುತ್ತಾ ಗಾಂಧೀಯವರು ಕ್ರಾಂತಿಕಾರಿಗಳನ್ನು ಖಂಡಿಸುವ ನಿರ್ಣಯಕ್ಕೆ ಬೆಂಬಲ ಕೋರಿದರು.

ಅಧಿವೇಶನದ ನಂತರ ತಮ್ಮ ಪತ್ರಿಕೆ (ಯಂಗ್ ಇಂಡಿಯಾ)ಯಲ್ಲಿ 'ಬಾಂಬಿನ ಪಂಥ' ಎಂಬ ಉಗ್ರವಾದ ಲೇಖನ ಬರೆದು ಕ್ರಾಂತಿಕಾರಿಗಳನ್ನು, ಅವರ ಮಾರ್ಗ, ಉದ್ದೇಶ ಹಾಗೂ ವಿಧಾನಗಳನ್ನೆಲ್ಲ ಉಗ್ರವಾಗಿ ಖಂಡಿಸಿದರು. ಗಾಂಧೀಯವರ ಲೇಖನ ತಮ್ಮ ವಿಷಯದಲ್ಲಿ ಜನತೆಯ ಮೇಲೆ ದುಷ್ಪರಿಣಾಮ ಬೀರಬಹುದೆಂದು ಆಜಾದ್ ಚಿಂತಿಸಿದರು. ಕ್ರಾಂತಿಕಾರಿಗಳ ಸರ್ವೋಚ್ಚ ಸೇನಾಪತಿಯಾಗಿ ಗಾಂಧೀಯವರ ದುಷ್ಟ ಪ್ರಚಾರಕ್ಕೆ ಉತ್ತರ ನೀಡುವುದು ತನ್ನ ಕರ್ತವ್ಯವೆಂದು ಭಾವಿಸಿದರು. ದೀರ್ಘ ಚರ್ಚೆಯ ನಂತರ ಗಾಂಧೀಯ ಆಪಾದನೆಗೆ ಉತ್ತರ ಸಿದ್ಧವಾಯಿತು. ಅದೇ 'ಬಾಂಬಿನ ದರ್ಶನ'. ಈ ಪ್ರಕಟನೆ ಕ್ರಾಂತಿಕಾರಿಗಳ ದೃಷ್ಟಿಕೋನ ತಿಳಿಸುವ ದಾಖಲೆಯಾಗಿ ಉಳಿದಿದೆ. "ಗಾಂಧೀಯವರು ತಮ್ಮ 'ಬಾಂಬಿನ ಪಂಥ' ಎಂಬ ಲೇಖನದಲ್ಲಿ ಪ್ರೀತಿಯ ಮೂಲಕ ಹೃದಯ ಪರಿವರ್ತನೆಮಾಡಿ ಶತ್ರುವನ್ನು ಜಯಿಸುತ್ತೇವೆ ಎಂದು ಹೇಳಿದ್ದಾರೆ. ಅವರು ಈ ರೀತಿಯಲ್ಲಿ ಎಷ್ಟು ಮಂದಿಯನ್ನು ಗೆದ್ದಿದ್ದಾರೆ? ಮೈಕಲ್ ಓಡ್ವೈಯರ್, ಜನರಲ್‌ಡಯರ್, ಲಾರ್ಡ್‌ರೀಡಿಂಗ್, ಲಾರ್ಡ್ ಇರ್ವಿನ್...ಇವರ ಪೈಕಿ ಯಾರ ಹೃದಯವನ್ನು ಅವರು ಪರಿವರ್ತಿಸಿದ್ದಾರೆ? ಇನ್ನು ಬ್ರಿಟಿಷ್ ಸಾಮ್ರಾಜ್ಯವನ್ನೇ ಗೆಲ್ಲುವ ಒಣ ಆಸೆ ಏಕೆ? ಕ್ರಾಂತಿಕಾರಿಗಳಿಗೆ ಯಾವ ಸಹಾಯ, ಸಹಾನುಭೂತಿ ತೋರದಂತೆ ಜನರಿಗೆ ಗಾಂಧೀ ಕರೆನೀಡಿದ್ದಾರೆ. ತಾವೇ ಜನರ ಹೃದಯ-ಬಡಿತ ಬಲ್ಲವರೆಂಬ ನಂಬಿಕೆ ಗಾಂಧೀಯವರದು. ಕ್ರಾಂತಿಕಾರಿಗಳ ಹೃದಯ ಮಿಡಿತ ಅರಿಯಲು ಅವರು ಯತ್ನಿಸಿಲ್ಲ. ಕ್ರಾಂತಿಕಾರಿಗಳು ಎಲ್ಲ ಅಡ್ಡಿ-ಆತಂಕಗಳನ್ನು ಮೆಟ್ಟಿ, ತಮ್ಮ ಧ್ಯೇಯಕ್ಕೆ ತಮ್ಮನ್ನು ತಾವೇ ಸಮರ್ಪಿಸಿಕೊಂಡಿದ್ದಾರೆ. ಯಶಸ್ಸು-ಅಪಯಶಸ್ಸು ಅವರಿಗೆ ನಗಣ್ಯ". ಇದು 'ಬಾಂಬಿನ ದರ್ಶನ' ಪ್ರಕಟನೆಯ ಸಾರಾಂಶ.

ಕ್ರಾಂತಿಕಾರಿಗಳು ಉತ್ತಮ ಶಿಕ್ಷಣ ಪಡೆದು ಸಜ್ಜಿತರಾಗಬೇಕೆಂದು ಆಜಾದ್‌ರು ಸಂಕಲ್ಪಿಸಿದ್ದರು. ಕೆಲವರನ್ನು, ಕ್ರಾಂತಿಕಾರಿಗಳ 'ಮಕ್ಕಾ' ಆಗಿದ್ದ ರಶಿಯಕ್ಕೆ ಕಳಿಸಲು ಯೋಚಿಸಿ ಆ ಬಗ್ಗೆ ಕಾರ್ಯಪ್ರವೃತ್ತರಾಗಿದ್ದರು. ದಿನೇದಿನೇ ಆಜಾದ್‌ರಲ್ಲಿ ಬೌದ್ಧಿಕ ವಿಕಾಸವಾಗತೊಡಗಿತ್ತು. ವ್ಯಕ್ತಿತ್ವ ದಿನೇದಿನೇ ವರ್ಧಿಸುತ್ತಿತ್ತು. ಸಮಾಜವಾದಿ ವಿಚಾರಧಾರೆಯ ಅಧ್ಯಯನ ಪ್ರಾರಂಭವಾಗಿತ್ತು. ಸ್ವತಃ ಹೆಚ್ಚು ಓದುಬರಹ ಅರಿಯದ ಆಜಾದ್ ಇಂಗ್ಲೀಷ್ ಪುಸ್ತಕಗಳನ್ನು ಬೇರೆಯವರಿಂದ ಓದಿಸಿ ತಿಳಿಯುತ್ತಿದ್ದರು.

ಸ್ಥಳ ಅಲಹಾಬಾದ್, ಫೆಬ್ರವರಿ 27, 1931. ಬೆಳಗಿನ ಸಮಯ. ಆಜಾದ್‌ರು ಹೊರಹೊರಟರು. ಎಂದಿನಂತೆ ಕಚ್ಚೆಪಂಚೆ ಬಿಗಿದು ಜುಬ್ಬಾ ಧರಿಸಿ, ಮೇಲೆ ತೋಳಿಲ್ಲದ ಕೋಟು ಧರಿಸಿದ್ದರು. ಜೇಬಿನಲ್ಲಿ .32 ಬೋರಿನ ಅಟೋಮ್ಯಾಟಿಕ್ ಕೋಲ್ಟ್ ಕ್ಯಾಲಿಬರ್ ಪಿಸ್ತೂಲು. ಆಜಾದ್ ಮತ್ತು ಸುಖದೇವ್‌ರಾಜ್‌ರು ಜೊತೆಗೂಡಿ ಆಲ್ಫ್ರೆಡ್ ಪಾರ್ಕ್‌ನೆಡೆ ಹೊರಟರು. ಅಲ್ಲಿ ಯಾವುದೋ ಸಂದೇಶಕ್ಕಾಗಿ ಆಜಾದ್ ಕಾಯುತ್ತಿದ್ದರು. ನೇರಳೆಮರದ ಕೆಳಗೆ ಕುಳಿತು ಇಬ್ಬರೂ ಗಾಢವಾಗಿ ಸಂಭಾಷಿಸುತ್ತಿದ್ದರು. ರಸ್ತೆಯಲ್ಲಿ ವಾಹನಗಳು ಹೋಗುವುದು-ಬರುವುದು ಅಷ್ಟಾಗಿ ಕಾಣುತ್ತಿರಲಿಲ್ಲ.

ಆಜಾದ್‌ರನ್ನು ಗುಪ್ತಚಾರರು ಪತ್ತೆಹಚ್ಚಿಬಿಟ್ಟಿದ್ದರು. ಆಜಾದ್‌ರ ಜೊತೆಗಾರ (ವೀರಭದ್ರ ತಿವಾರಿ)ನೇ ದ್ರೋಹವೆಸಗಿದ್ದ. ಆಜಾದ್‌ರ ಚಲನವಲನದ ಮಾಹಿತಿ ಪೋಲೀಸರಿಗೆ ತಿಳಿಸಿಬಿಟ್ಟಿದ್ದ. ಆಲ್ಫ್ರೆಡ್ ಪಾರ್ಕಿನಲ್ಲಿ ಆಜಾದ್‌ರು ಕುಳಿತಿರುವ ಸಂದೇಶ ತಲುಪಿದೊಡನೆ ಪೋಲೀಸ್ ಸುಪರಿಂಟೆಂಡೆಂಟ್ ನಾಟ್‌ಬಾವರ್‌ನ್ನು ಹೊತ್ತ ಕಾರು ಪಾರ್ಕನ್ನು ಪ್ರವೇಶಿಸಿತು. ನಾಟ್‌ಬಾವರ ತನ್ನ .455 ಬೋರಿನ ರಿವಾಲ್ವರನ್ನು ಹೊರತೆಗೆದು ಮಿಂಚಿನ ಗತಿಯಲ್ಲಿ ಆಜಾದ್ ರತ್ತ ಗುಂಡುಹಾರಿಸಿದ. ಗುಂಡು ಆಜಾದ್‌ರ ತೊಡೆಯಲ್ಲಿ ಕಚಕ್ಕನೇ ಸಿಕ್ಕಿಕೊಂಡಿತು. ರಕ್ತ ಚಿಮ್ಮಿತು. ನಾಟ್‌ಬಾವರು ಉಪಯೋಗಿಸಿದ ಪಿಸ್ತೂಲಿನ ಒಂದೊಂದು ಗುಂಡಿನಿಂದ ಹುಲಿ-ಸಿಂಹಗಳನ್ನೇ ಕೊಂದುಹಾಕಬಹುದಿತ್ತು.

ಆಲ್ಫ್ರೆಡ್ ಪಾರ್ಕನ್ನು ಸಶಸ್ತ್ರ ಪೋಲೀಸ್ ಪಡೆ ಸುತ್ತುವರೆದಿತ್ತು. ಆಜಾದ್‌ರು ತಲೆಎತ್ತಿ ಪರಿಸ್ಥಿತಿ ಅರ್ಥಮಾಡಿಕೊಂಡರು. ತಮ್ಮ ಅಚ್ಚು

(6ನೇ ಪುಟನೋಡಿ)

ಖ್ಯಾತ ಪತ್ರಿಕೆಗಳ ವಿಕೃತ ಪ್ರಚಾರ

(3ನೇ ಪುಟದಿಂದ)

ಯಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲ. ದಾಸ್‌ಮುನ್ಸಿ ಮತ್ತು ಕೆ. ಪಿ. ಉನ್ನಿಕೃಷ್ಣನ್ ಇಬ್ಬರೂ ಇತ್ತೀಚಿಗೆ ಇತ್ತ ಹೇಳಿಕೆಗಳಿಂದ ಎಡರಂಗ ಸರಕಾರದ ಬಗ್ಗೆ ತಮ್ಮ ನಿಲುವಿನ ವಿಚಾರದಲ್ಲಿ ಪುನರ್ಚಿಂತನೆ ಮಾಡಿರುವುದರ ಸುಳಿವನ್ನು ಕೊಟ್ಟಿದ್ದಾರೆ. ನಾವು ಅದನ್ನು ಸ್ವಾಗತಿಸುತ್ತೇವೆ. ಪ. ಬಂಗಾಳದ ಎಡರಂಗ ಮತ್ತು ಸರಕಾರದ ಬಗ್ಗೆ ಅವರ ನಿಖರವಾದ ನಿಲುವನ್ನು ನಾವು ಸ್ವಾಗತಿಸುತ್ತೇವೆ. ಆದರೆ ಕೆಲವು ಪಿ. ಬಿ. ಸದಸ್ಯರು ಕಾಂಗ್ರೆಸ್(ಯು) ಜೊತೆಗಿನ ರಂಗಕ್ಕೆ ಪರವಾಗಿಯೂ ಮತ್ತೆ ಕೆಲವರು ವಿರುದ್ಧವಾಗಿಯೂ ಇದ್ದಾರೆಂಬ ಪ್ರಚಾರ-ಬಂಡವಾಳಶಾಹಿ ಪತ್ರಿಕೆಗಳು ಮಾಡಿರುವ ಪ್ರಚಾರ ದುರುದ್ದೇಶಪೂರಿತವಾಗಿದೆ. ಮತ್ತು ನಮ್ಮ ದೇಶದ ಜನತೆಯು ಕೆಲವು ಕಿತ್ತುತಿನ್ನುತ್ತಿರುವ ಸಮಸ್ಯೆಗಳ ವಿಚಾರದಲ್ಲಿ ಐಕ್ಯ ಹೋರಾಟವನ್ನು ನಡೆಸುವ ಸಲುವಾಗಿ ಆರು ಪಕ್ಷಗಳ ಸಮನ್ವಯ ಸಮಿತಿಯವರು ಸಾಧಿಸಿದ ಒಗ್ಗಟ್ಟನ್ನು ಮುರಿಯಲು ಮಾಡಿದ ಒಳಸಂಚಾಗಿದೆ.

ನಮ್ಮ ಪಾರ್ಟಿಯ ಹತ್ತನೇ ಕಾಂಗ್ರೆಸ್‌ನಲ್ಲಿನ ತೀರ್ಮಾನದ ಪ್ರಕಾರ ನಮ್ಮ ಪಾರ್ಟಿ ಈಗ ಮುನ್ನಡೆಯುತ್ತಿದೆ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯನ್ನು ಸಾಧಿಸಬೇಕು ಹಾಗೂ ಅದೇ ಕಾಲದಲ್ಲಿ ಕೇಂದ್ರ ಮತ್ತು ರಾಜ್ಯಸರಕಾರಗಳಲ್ಲಿರುವ ಕಾಂಗ್ರೆಸ್(ಐ)ನವರ ನೇತೃತ್ವದಲ್ಲಿ ಆಗುತ್ತಿರುವ ಸರ್ವಾಧಿಕಾರಿ ಶಕ್ತಿಗಳ ದಾಳಿಯನ್ನು ಸೋಲಿಸುವ ಸಲುವಾಗಿ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಯಲ್ಲಿ ಆಸಕ್ತಿಯಿರುವ ಎಲ್ಲ ಜನಗಳ ಸಹಾಯದಿಂದ ಸರ್ವಾಧಿಕಾರಿ ವಿರೋಧಿ ರಂಗವನ್ನು ರಚಿಸಲು ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ನಮ್ಮ ಪಾರ್ಟಿಕಾಂಗ್ರೆಸ್ ಆದೇಶವಿತ್ತಿದೆ. ಈ ಆದೇಶಕ್ಕೆ ನಮ್ಮ ಪಾರ್ಟಿಯ ಪೊಲಿಟ್‌ಬ್ಯೂರೋ, ಕೇಂದ್ರ ಸಮಿತಿ, ರಾಜ್ಯ, ಜಿಲ್ಲಾ ಹಾಗೂ ಸ್ಥಳೀಯ ಘಟಕಗಳು ಬದ್ಧವಾಗಿವೆ. ಪ. ಬಂಗಾಳದ ನಮ್ಮ ಪಾರ್ಟಿ ಘಟಕವು ಈ ಹತ್ತನೇ ಪಾರ್ಟಿ ಕಾಂಗ್ರೆಸ್‌ನ ತೀರ್ಮಾನಕ್ಕೆ ವಿರುದ್ಧವಾಗಿದೆ ಎಂಬ ಪ್ರಚಾರವು ಕೇವಲ ಕಟ್ಟುಕತೆಯಷ್ಟೇ.

ಪಾರ್ಟಿಯ ನಿಲುವು

ಎಡ ಮತ್ತು ಪ್ರಜಾಪ್ರಭುತ್ವವಾದೀ ರಂಗವನ್ನು ರಚಿಸುವುದು, ಸರ್ವಾಧಿಕಾರಿ ವಿರೋಧಿ ವಿಶಾಲರಂಗವನ್ನು ಮಾಡುವುದಾಗಲೀ ಸುಲಭವಲ್ಲ ಎಂಬ ಅರಿವು ನಮ್ಮ ಪಿ. ಬಿ. ಮತ್ತು ಕೇಂದ್ರ ಸಮಿತಿಗೆ ಇದೆ. ಇಂದು ರಾಜಕೀಯ ಪಕ್ಷಗಳು ಮತ್ತು ಅವುಗಳ ಮೈತ್ರಿಕೂಟಗಳು ರಾಜ್ಯದಿಂದ ರಾಜ್ಯಕ್ಕೆ ಬೇರೆಯಾಗಿಯೇ ಇವೆ. ಕೆಲವು ಕಡೆ ಎಡರಂಗ ಮತ್ತು ಎಡರಂಗ ಸರ್ಕಾರಗಳಿವೆ. ಕೇರಳದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಸರ್ಕಾರ ರೂಪುಗೊಂಡಿದೆ. ಇನ್ನು ಕೆಲವು ರಾಜ್ಯಗಳಲ್ಲಿ ಜನತೆಯ ದಿನನಿತ್ಯದ ಬೇಡಿಕೆಗಳ ಪರ ಐಕ್ಯಹೋರಾಟವನ್ನು ಮಾಡುವದರ ಸಲುವಾಗಿ ಆರು ಪಕ್ಷಗಳ ಸಮನ್ವಯ ಸಮಿತಿಯ ಮಾದರಿಯಲ್ಲಿ ಬೇರೆ ಬೇರೆ ಪಕ್ಷಗಳು ಮತ್ತು ಗುಂಪುಗಳು ಒಂದೆಡೆ ಸೇರಿವೆ. ಎಡ ರಂಗವಿದ್ದು ದು ಎಡ ಮತ್ತು ಪ್ರಜಾಪ್ರಭುತ್ವ ರಂಗವಾಗಿಯೋ ಅಥವಾ ಇನ್ನಾವುದೋ ರಂಗವಾಗಿಯೋ ಆದೇಶಗಳ ಮೂಲಕ ರಾತ್ರಿ ಬೆಳಗಾಗುವದರೊಳಗಾಗಿ ಆಗುವ ಕೆಲಸವಲ್ಲ, ಎಲ್ಲಾ ರಾಜ್ಯಗಳಲ್ಲಿ ಮತ್ತು ಅಖಿಲ ಭಾರತ ಮಟ್ಟದಲ್ಲಿ ಈ ರಂಗಗಳ ರಚನೆಗಾಗಿ ಶ್ರಮಿಸುವುದು ನಮ್ಮ ದೇಶದ ಪ್ರಜ್ಞಾವಂತ ನಾಗರಿಕನ ಕರ್ತವ್ಯವಾಗಿದೆ. ಈಗಿರುವ ಬಂಡವಾಳಶಾಹಿ-ಭೂಮಾಲಕ ವರ್ಗದ ಆಡಳಿತ ಮತ್ತು ಅದರ ಜನವಿರೋಧಿ ನೀತಿಗಳ ವಿರುದ್ಧ ಅಪ್ಪಟವಾದ ಪರ್ಯಾಯವಾಗುವಂತೆ ನಮ್ಮ ದೇಶದ ರಾಜಕೀಯ ಶಕ್ತಿಗಳ ಮತ್ತು ವರ್ಗಗಳ ಪುನರ್ವಿಂಗಡನೆಗಾಗಿ ನಡೆಸಬೇಕಾದಂಥ ಹೋರಾಟವಾಗಿದೆ. ಈಗ ಶೈಶವಾವಸ್ಥೆಯಲ್ಲಿದ್ದರೂ ಕೂಡ, ಆ ತರದ ಹೋರಾಟ ಪ್ರಾರಂಭವಾಗಿದೆ ಮತ್ತು ರೂಪುಗೊಳ್ಳುತ್ತಿದೆ. ಈ ಹೋರಾಟದ ಸಂಪೂರ್ಣ ಯಶಸ್ವಿಗಾಗಿ ಇದಕ್ಕೆ ಸಹಕಾರ ನೀಡುವ ಎಲ್ಲ ರಾಜಕೀಯ ಪಕ್ಷಗಳು ಮತ್ತು ಗುಂಪುಗಳ ಜತೆ ಹೆಗಲಿಗೆಹೆಗಲು ಕೊಟ್ಟು ಕೆಲಸಮಾಡಲು ಸಿ.ಪಿ.ಐ. (ಎಂ) ನಿರ್ಧರಿಸಿದೆ. ಪ್ರಾಯಶಃ ನಮ್ಮ ಈ ಅಚಲ ನಿರ್ಧಾರ ಹಾಗೂ ಪ್ರಯತ್ನಗಳು ದೊಡ್ಡ ಬಂಡವಾಳಶಾಹಿಗಳಿಗೆ ಸಹಿಸಲಾಗದೆ ಅವರು ನಮ್ಮ ವಿರುದ್ಧ ಸುಳ್ಳುಸುದ್ದಿ, ಕಟ್ಟುಕತೆಗಳನ್ನು ಹಬ್ಬಿಸುತ್ತಿದ್ದಾರೆ.

ಈ ದೊಡ್ಡ ಬಂಡವಾಳಶಾಹಿಗಳು ಮತ್ತು ದೇಶದಲ್ಲಿರುವ ಎಲ್ಲಾ ಎಡವಿರೋಧಿ ಗುಂಪುಗಳು ಭಾರತೀಯ ಜನತಾಪಕ್ಷ ಮತ್ತು ಅದರ ಆರ್.ಎಸ್.ಎಸ್. ಬಂಡುಕೋರರನ್ನು ಕಾಂಗ್ರೆಸ್ (ಐ)ಗೆ ವಿರುದ್ಧವಾದ ಪರ್ಯಾಯವಾದ ಪಕ್ಷವೆಂದು ಸಾರುವುದರಲ್ಲಿ ನಿರತರಾಗಿದ್ದಾರೆ. ಎ.ಬಿ. ವಾಜಪೇಯಿಯವರನ್ನು 'ನೆರಳು ಮಂತ್ರಿಮಂಡಳ'ದ ನಾಯಕನೇನೋ ಎನ್ನುವ ರೀತಿಯಲ್ಲಿ ಬಂಡವಾಳಶಾಹಿ ಪತ್ರಿಕೆಗಳು ಹೊಗಳುತ್ತಿವೆ. ಇದರಿಂದ ಇಂದಿರಾಗಾಂಧಿಗೆ ಆದಷ್ಟು ಖುಷಿಯಾಗುತ್ತದೆ. ಒಂದು ಕಡೆ ತೀವ್ರ ಬಲ ಪ್ರತಿಗಾಮೀ ಶಕ್ತಿಗಳ ವಿರುದ್ಧ ತಾನು ಹೋರಾಡುತ್ತಿರುವವಳೆಂದೂ, ಮತ್ತೊಂದು ಕಡೆ ಜನರ ಸಂಕಷ್ಟಗಳನ್ನು ಪರಿಹರಿಸುವ ಮಧ್ಯವಾದಿಯೆಂದೂ ಸಾರಿಕೊಳ್ಳುತ್ತಿದ್ದಾಳೆ. ಈ ರೀತಿಯ ಆಟಗಳಲ್ಲಿ ತಾನು ಪ್ರವೀಣೆಯೆಂದು ಹಲವಾರು ವರ್ಷಗಳಿಂದಲೂ ಸಾಬೀತುಪಡಿಸುತ್ತಿದ್ದಾಳೆ. ಪಕ್ಷದ ಮೇಲೆ ಪ್ರತ್ಯೇಕವಾಗಿ ಯೋಜಿತ ದಾಳಿಯನ್ನು ಮಾಡುತ್ತಾ ಮತ್ತು ಪಕ್ಷದ ಹೆಸರಿಗೆ ಕಳಂಕತರುತ್ತಾ, ಎಡ ವಿರೋಧಿ ಪಕ್ಷಗಳ ಮೇಲೆ ತನ್ನೆಲ್ಲ ಬೆಂಕಿಯನ್ನು ಏಕೆ ಕಾರುತ್ತಾಳೆಂದು ಯಾರಾದರೂ ತಿಳಿದುಕೊಳ್ಳಬಹುದು. ಮೂವತ್ತು ವರ್ಷಗಳನ್ನು ಹಳೆಯದಾದ ಬಂಡವಾಳಶಾಹಿ-ಭೂಮಾಲಕವರ್ಗದ ಆಡಳಿತದ, ದೇಶದ ಇಂದಿನ ದುಃಸ್ಥಿತಿ ಮತ್ತು ದಿವಾಳಿತನಕ್ಕೆ ಕಾರಣವಾದ ಆಡಳಿತದ ವಿರುದ್ಧವಾಗಿ ಒಂದು ಪರ್ಯಾಯ ಪಕ್ಷವನ್ನು ಪರಿಗಣಿಸುವ ಯೋಜನೆಗೇ ಅಪಕೀರ್ತಿಯನ್ನು ತರುವ ಒಂದೇ ಒಂದು ಉದ್ದೇಶ ಈ ವಿಶೇಷ ವರದಿಗಾರನದು. ಆದರೆ ಉಚ್ಛೈಯಲ್ಲಿ ವಿಂಸು ಹಿಡಿಯುವ' ಈ ಅವರ ಕಾರ್ಯ ಅವರನ್ನು ಎಲ್ಲಿಗೂ ತೆಗೆದುಕೊಂಡು ಹೋಗುವುದಿಲ್ಲ.

ಮುಕ್ತಾಯ ಹಾಡುವ ದಕ್ಕೆ ಮುಂಚೆ, ಚೀನಾವು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರವನ್ನು ಪೂರೈಸುತ್ತಿರುವುದರಿಂದ ಚೀನಾ ಕಮ್ಯುನಿಸ್ಟ್ ಪಕ್ಷದೊಂದಿಗೆ ಪಕ್ಷ-ಪಕ್ಷ ಸಂಬಂಧವಿಟ್ಟುಕೊಳ್ಳುವುದು ಸಾಧುವಲ್ಲವೆಂದು ನಮಗೆ ಪಾಠ ಹೇಳುವ ನಮ್ಮ ಬಂಡವಾಳಶಾಹಿ ಟೀಕಾಕಾರರ ಪ್ರಯತ್ನದತ್ತ ಗಮನ ಹರಿಸಬೇಕಾಗಿದೆ. ಯಾವದೇ ಸಮಾಜವಾದೀ ರಾಷ್ಟ್ರ ಮತ್ತೊಂದು ಸಮಾಜವಾದಿಯಲ್ಲದ ರಾಷ್ಟ್ರಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವ ವಿಚಾರದಲ್ಲಿ ನಮಗೆ ಸ್ವತಂತ್ರವಾದ ನಿಲುವಿದೆ. ಸಾಮ್ರಾಜ್ಯಶಾಹಿಗೆ ವಿರುದ್ಧ ದೇಶದ ಸ್ವಾತಂತ್ರ್ಯರಕ್ಷಣೆಗಾಗಿ ಶಸ್ತ್ರಾಸ್ತ್ರ ಸರಬರಾಜು ಮಾಡುವನೊಂದನ್ನು ಬಿಟ್ಟು ಬೇರಾವದೋ ಕಾರಣಕ್ಕಾಗಿ ಶಸ್ತ್ರಾಸ್ತ್ರ ಸರಬರಾಜು ವುದಕ್ಕೆ ಸಿ.ಪಿ.ಐ (ಎಂ) ಪರವಾಗಿಲ್ಲ. ಯಾವುದೋ ಅಥವಾ ಇನ್ನೊಂದು ರಾಷ್ಟ್ರಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿದೆ ಎಂಬ ಒಂದೇ ಒಂದು ಕಾರಣಕ್ಕಾಗಿ ಆ ಕಮ್ಯುನಿಸ್ಟ್ ಪಕ್ಷದ ಜೊತೆ ಸಂಬಂಧವಿಟ್ಟುಕೊಳ್ಳಬಾರದೆನ್ನುವ ಧೋರಣೆಯನ್ನು ನಾವು ತಿರಸ್ಕರಿಸುತ್ತೇವೆ. ಚೀನಾದ ಜೊತೆಗಿನ ಅಥವಾ ಬೇರಾವದೇ ರಾಷ್ಟ್ರದ ಸಂಬಂಧವನ್ನು ವೃದ್ಧಿಸಿಕೊಳ್ಳುವಲ್ಲಿ ಭಾರತ ಸರಕಾರವನ್ನು ಕೂಡ ಈ ಶಸ್ತ್ರಾಸ್ತ್ರ ಸರಬರಾಜು ಮಾಡುವ ವಿಚಾರ ತಡೆಯಲಾರದು. ಹೀಗಿರಬೇಕಾದಲ್ಲಿ ಸಿ.ಪಿ.ಐ.(ಎಂ) ಪಕ್ಷ-ಪಕ್ಷ ಸಂಬಂಧವಿಟ್ಟುಕೊಳ್ಳಬಾರದೆಂಬ ಉಪದೇಶದ ಅರ್ಥವಾದರೂ ಏನು?

(ಮುಗಿಯಿತು)

ಶಹೀದ್ ಚಂದ್ರಶೇಖರ್ ಆಜಾದ್

[5ನೇ ಪುಟದಿಂದ]

ಮೆಚ್ಚಿನ ಸಂಗಾತಿಯಾದ ಆಟೋಮ್ಯಾಟಿಕ್ ಪಿಸ್ತೂಲು ಹೊರತೆಗೆದು ನಾಟ್‌ಬಾವರನ ತೋಳಿಗೆ ಗುರಿಯಿಟ್ಟರು. ಗುಂಡು ನಾಟ್‌ಬಾವರ್‌ನ ಬಲತೋಳನ್ನು ಹೊಕ್ಕಿತು. ಆಜಾದ್‌ರಿಗೆ ಗುಂಡುಹೊಡೆದ ಅವನ ಪಿಸ್ತೂಲು ದೂರ ಸಿಡಿದುಬಿದ್ದಿತು. ತತ್ತರಿಸಿದ ನಾಟ್‌ಬಾವರ ಪಲಾಯನಮಾಡಿದ. ಪೋಲೀಸರು ಗುಂಡಿನ ಮಳೆಗರೆಯುತ್ತ ಮುನ್ನುಗ್ಗಿ ಬರುತ್ತಿದ್ದರು. ಅಂಥ ಸಮಯದಲ್ಲೂ ಆಜಾದ್‌ರು ಗರ್ಜಿಸಿದರು, "ಹಿಂದುಸ್ತಾನೀ ಪೋಲೀಸ್ ಬಾಂಧವರೇ! ನನ್ನ ಮೇಲೇಕೆ ಗುಂಡುಹಾರಿಸುತ್ತಿದ್ದೀರಿ? ನಾನು ನಿಮ್ಮೆಲ್ಲರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದೇನೆ"? ಆದರೆ ಬ್ರಿಟಿಷರ ಎಂಜಲುನಾಯಿಗಳು ಈ ಪುರುಷ ಸಿಂಹನನ್ನು ಬಲಿತೆಗೆದುಕೊಳ್ಳುವ ನಿರ್ಧಾರಮಾಡಿದ್ದವು.

ತಕ್ಷಣ ತಪ್ಪಿಸಿಕೊಳ್ಳಲು ಸುಖದೇವ್‌ರಾಜ್‌ರಿಗೆ ಆಜಾದ್‌ರು ಆದೇಶ ನೀಡಿದರು. ಪೋಲೀಸ್ ಪಡೆಯನ್ನು ಏಕಾಂಗಿಯಾಗಿ ಎದುರಿಸುವ ಸಂಕಲ್ಪ ಮಾಡಿದರು. 80 ಸಶಸ್ತ್ರ ಪೋಲೀಸರುದುರು ಆಜಾದ್ ಮೂವತ್ತೆರಡು ನಿಮಿಷಗಳ ಕಾಲ ಹೋರಾಡಿದರು. ಗುಂಡೇಟಿನಿಂದ ಬಲಗೈ ನಿರುಪಯುಕ್ತವಾದಾಗ ಎಡಗೈಯಿಂದ ಗುಂಡು ಚಲಾಯಿಸಿದರು.

ಒಂದೇ ಒಂದು ಗುಂಡು ಆಜಾದರಲ್ಲಿ ಉಳಿದಿತ್ತು. ಅವರ ಕಣ್ಮುಂದೆ ನೆನಪು ಮರುಕಳಿಸಿತು...10 ವರ್ಷಗಳ ಹಿಂದೆ ವಾರಣಾಸಿಯಲ್ಲಿ ಪೋಲೀಸರು ಛಡಿಬಾರಿಸುತ್ತಿದ್ದಾಗ ತಳೆದ ಪ್ರತಿಜ್ಞೆ-ಇನ್ನೆಂದೂ ಪೋಲೀಸರ ಕೈವಶವಾಗುವುದಿಲ್ಲ.

ದುಷ್ಮನೋಂಕಿ ಗೋಲಿಯೋಂಸೆ
ಹಮ್ ಸಾಮನಾ ಕರೇಂಗೇ
ಆಜಾದ್ ಹೀ ರಹೇ ಹೈ ಹಮ್
ಆಜಾದ್ ಹೀ ರಹೇಂಗೇ.

[ಶತ್ರುಗಳ ಗುಂಡಿನೇಟು ದಿಟ್ಟತನದಲ್ಲಿ ತಡೆವೆವು ನಾವು, ಸ್ವತಂತ್ರರಾಗಿಯೇ ಜೀವಿಸುತ್ತ ನಾವು ಸ್ವತಂತ್ರರಾಗಿಯೇ ಉಳಿವೆವು]

ಆಜಾದರು ನಿರ್ಧಾರ ಮಾಡಿದರು-ಬ್ರಿಟಿಷರ ಕೈವಶವಾಗುವುದಿಲ್ಲವೆಂದು. ತಮ್ಮ ಪ್ರಾಣಪ್ರಿಯ ಪಿಸ್ತೂಲಿನಿಂದಲೇ ತಲೆಗೆ ಗುಂಡುಹೊಡೆದುಕೊಂಡರು. ಗುಂಡು ತಲೆಯನ್ನು ಬೇಧಿಸಿಕೊಂಡು ಹೊರಹಾರಿತು. ಮಹಾಪರಾಕ್ರಮಿ ಆಜಾದ್ ಧರೆಗೊರಗಿದರು. ಆಗ ಅವರ ವಯಸ್ಸು ಕೇವಲ ಇಪ್ಪತ್ತನಾಲ್ಕು ಮಾತ್ರ ದಾಟಿತ್ತು.

ಕದನ ನಿಂತಾದ ಮೇಲೆ ಆಜಾದ್‌ರ ಶವ ಒರಗಿದೆಡೆ ನಾಟ್‌ಬಾವರ್ ಬಂದನು. ಪಕ್ಕದಲ್ಲಿದ್ದ ಪೋಲೀಸನೆಡೆ ತಿರುಗಿ ಹೇಳಿದ: "ಗುಂಡು ಹಾರಿಸು"! ಪೋಲೀಸ್ ಶವದ ಮೇಲೇ ಗುಂಡು ಹಾರಿಸಿದ. ಆಜಾದ್ ಜೀವಂತವಾಗಿದ್ದಾಗ ಮಾತ್ರವಲ್ಲ, ಅವರ ಶವವೂ ಬ್ರಿಟಿಷರಿಗೆ ಸಿಂಹಸ್ವಪ್ನ.

ಆಜಾದ್ ನಿಧನರಾದ ಮೇಲೆ ಒಬ್ಬ ಗೃಹಸ್ಥೆ ಈ ರೀತಿ ಬರೆದಿದ್ದಾರೆ "ಒಬ್ಬ ಧೀರ ಕೊಲ್ಲಲ್ಪಟ್ಟನೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಒಬ್ಬ ಧೀಮಂತ ಸೇನಾಪತಿ ನಿಧನರಾದರೇ ಎಂದು ಹೇಳುತ್ತಾರೆ. ಆದರೆ ನಮಗೆ ಮನೆಯ ಆತ್ಮೀಯನೊಬ್ಬನನ್ನು ಕಳೆದುಕೊಂಡೆವೆಂದೇ ಅನ್ನಿಸುತ್ತದೆ!". ತಮ್ಮ ಸಂಪರ್ಕಕ್ಕೆ ಬಂದವರ ಮೇಲೆ ಆಜಾದ್‌ರ ಪ್ರಭಾವ ಅಪಾರ.

ಆಜಾದ್‌ರ ಕಾರ್ಯವೈಖರಿ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಅವರ ತ್ಯಾಗ-ನಿಷ್ಠೆ ಶಂಕಾತೀತ. ಆಜಾದ್ ನಿಧನರಾಗಿ ಐವತ್ತು ವರ್ಷಗಳಾದವು. ಶೋಷಣೆಗೆ ಎಡೆ ಇಲ್ಲದ ಆಜಾದ್‌ರ ಭಾರತದ ಕನಸು ಇನ್ನೂ ನನಸಾಗಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಬದಲು ದೇಶ ಬಂಡವಾಳಶಾಹಿ-ಜಮೀನ್ದಾರರು ಜನತೆಯನ್ನು ಶೋಷಿಸುತ್ತಿದ್ದಾರೆ.

ಆಜಾದ್‌ರು ನಿಧನವಾಗಿ ಐವತ್ತು ವರ್ಷ ಗತಿಸಿದ ಸಂದರ್ಭದಲ್ಲಿ ಆಜಾದ್‌ರ ನೆನಪಿಗೋಸ್ಕರ ಅಂಚೆಚೀಟಿಯನ್ನು ಮುದ್ರಿಸಲು ಅಭಿಮಾನಿಗಳು ಕೇಂದ್ರಸರ್ಕಾರವನ್ನು ವಿನಂತಿಸಿಕೊಂಡರು.

ಸಂಪರ್ಕಖಾತೆ ಮಂತ್ರಿ ಅಯೋಗ್ಯ ಸ್ಟೀಫನ್ ನಿರಾಕರಿಸಿದ.

(ವಿವಿಧ ಮೂಲಗಳಿಂದ)

(ಮುಗಿಯಿತು)

ಚಂದಾ ವಿವರ

ವಾರ್ಷಿಕ ಚಂದಾ	:	25ರೂ.
6 ತಿಂಗಳಿಗೆ	:	13ರೂ.
ಬಿಡಿ ಪ್ರತಿ	:	50ಪೈಸೆ

ಐಕ್ಯರಂಗಕ್ಕೆ

ಚಂದಾದಾರರಾಗಿ

ಸಿ.ಐ.ಟಿ.ಯು. ರಾಜ್ಯಸಮಿತಿ ಸದಸ್ಯರುಗಳು

1. ಕಾಂ. ಎಸ್. ಸೂರ್ಯನಾರಾಯಣರಾವ್ (ಅಧ್ಯಕ್ಷ) 2. ಕಾಂ. ಎನ್.ಕೆ.ಉಪಾಧ್ಯಾಯ (ಉಪಾಧ್ಯಕ್ಷ) 3. ಕಾಂ. ಟಿ.ಎಸ್. ಮಣಿ (ಉಪಾಧ್ಯಕ್ಷ) 4. ಕಾಂ. ಕೆ. ಮೂಸಬ್ಬ (ಉಪಾಧ್ಯಕ್ಷ), 5. ಕಾಂ. ಆರ್. ಜಿ. ಸ್ಥಳೇಕರ್(ಉಪಾಧ್ಯಕ್ಷ), 6. ಕಾಂ. ಸಿ. ನಂಜುಂಡಪ್ಪ (ಪ್ರಧಾನಕಾರ್ಯದರ್ಶಿ), 7. ಕಾಂ. ವಿ. ಜೆ. ಕೆ. ನಾಯರ್ (ಕಾರ್ಯದರ್ಶಿ), 8. ಕಾಂ. ಮಹಮದ್ ದಸ್ತಗೀರ್ (ಕಾರ್ಯದರ್ಶಿ), 9. ಕಾಂ. ಬಿ. ಮಾಧವ (ಕಾರ್ಯದರ್ಶಿ) 10. ಕಾಂ. ಟಿ. ಎಸ್. ಅನಂತರಾವ್ (ಖಜಾಂಜಿ) 11. ಕಾಂ. ನಾರಾಯಣರಾವ್ ಭಾನು 12. ಕಾಂ. ಆರ್. ಶ್ರೀನಿವಾಸ್, 13. ಕಾಂ. ಪಿ. ಕೆ. ಸುಬ್ರಮಣಿ, 14. ಕಾಂ. ಕೆ. ಎಸ್. ಸುಬ್ರಮಣ್ಯಂ, 15. ಕಾಂ. ಗಂಗಾಧರ ನಮೋಶಿ, 16. ಕಾಂ. ಡಿ ಎಂ. ಕಲಾಸಿ, 17. ಕಾಂ. ವಿ. ಎಂ. ಪೂಜಾರ್, 18. ಕಾಂ. ಎಂ. ಇಕ್ಬಾಲ್‌ಹುಸೇನ್, 19. ಕಾಂ. ಎನ್. ಜಿ. ಪಠಾಣ, 20. ಕಾಂ. ಎ. ಸಿ. ಕೇಶವ, 21. ಕಾಂ. ವಿ. ಸುಕುಮಾರ್, 22. ಕಾಂ. ಪಿ. ಕೆ. ಎ. ಲತೀಫ್, 23. ಕಾಂ. ಎಸ್. ಸವರಿದಾಸ್, 24. ಕಾಂ. ಎ. ಕಣ್ಣನ್ 25. ಕಾಂ. ಪಿ. ರಾಮಚಂದ್ರರಾವ್ 26. ಕಾಂ. ಬಿ. ನಾರಾಯಣ, 27. ಕಾಂ. ಕೆ. ಶಂಕರ್, 28. ಕಾಂ. ಯು. ಬಿ. ಲೋಕಯ್ಯ. 29. ಕಾಂ. ಮೋಹನ್‌ಕುಮಾರ್, 30. ಕಾಂ. ಎ. ಜಾನಮ್ಮ. 31. ಕಾಂ. ಸಲೀಮಾ ಬೇಗಂ–ಇವರು ನೂತನ ರಾಜ್ಯಸಮಿತಿಯ ಸದಸ್ಯರು.

ಅಲ್ಲದೆ 85 ಸದಸ್ಯರ ರಾಜ್ಯಮಂಡಳಿಯನ್ನೂ ಚುನಾಯಿಸಲಾಯಿತು.

ನಿರ್ಣಯಗಳು :

ಪಶ್ಚಿಮ ಬಂಗಾಲದ ಮತ್ತು ತ್ರಿಪುರಾದ ಎಡರಂಗ ಸರಕಾರಗಳನ್ನು ಮತ್ತು ಕೇರಳದ ಎಡ ಮತ್ತು ಪ್ರಜಾಪ್ರಭುತ್ವ ರಂಗದ ಸರಕಾರಗಳನ್ನು ಅಭಿನಂದಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಕುದುರೆಮುಖದ ಎಚ್.ಎಸ್.ಸಿ.ಎಲ್. ಕಾರ್ಮಿಕರು ಆರು ತಿಂಗಳಿಂದ ಹೋರಾಡುತ್ತಿದ್ದು ಅವರ ಹೋರಾಟಕ್ಕೆ, ಮೈಸೂರಿನ ಸಿ.ಎಸ್.ಟಿ.ಆರ್.ಐ., ಏಪ್ರಿಲ್‌ನಿಂದ ರಾಜ್ಯದಾದ್ಯಂತ ಪ್ರಾರಂಭವಾಗಲಿರುವ ಬೀಡಿಕಾರ್ಮಿಕರ ಮುಷ್ಕರವನ್ನು, ವಿಮಾ ನೌಕರರ, ಯುನೈಟೆಡ್ ಬ್ರಿವರೀಸ್ ನೌಕರರ ಮತ್ತು ಪ್ಲಾಂಟೇಶನ್ ಕಾರ್ಮಿಕರ ಬೇಡಿಕೆಗಳನ್ನು ಬೆಂಬಲಿಸುವ ಗೊತ್ತುವಳಿಗಳನ್ನು ಸಮ್ಮೇಳನ ಅಂಗೀಕರಿಸಿತು.

ಅಲ್ಪಸಂಖ್ಯಾತರ ರಕ್ಷಣೆಗೋಸ್ಕರ ಪ್ರಾಣವನ್ನೇ ಪಣವಾಗಿಟ್ಟು ಶ್ರಮಿಸುತ್ತಿರುವ ಅಸ್ಸಾಮಿನ ಸಿ.ಐ.ಟಿ.ಯು. ಮುಖಂಡರನ್ನು ಶ್ಲಾಘಿಸಿ ಸೌಹಾರ್ದ ಬೆಂಬಲಕೊಡುವ ನಿರ್ಣಯ ಮಂಜೂರಾಯಿತು.

ಬೆಲೆಏರಿಕೆ, ನಿರುದ್ಯೋಗ, ಪೋಲೀಸ್ ದಬ್ಬಾಳಿಕೆ, ರೈತ-ಕಾರ್ಮಿಕರ ಸಖ್ಯತೆ, ರಾಷ್ಟ್ರೀಯ ಭದ್ರತಾ ಶಾಸನ, ಯುವಜನರ ಹೋರಾಟ ಮೊದಲಾದ ವಿಷಯಗಳ ಮೇಲೆ ಸಮ್ಮೇಳನವು ಠರಾವು ಮಾಡಿದೆ.

o

ಕೊಡಗಿನಲ್ಲಿ ಹೆಚ್ಚುತ್ತಿರುವ ಪೋಲೀಸ್ ಮತ್ತು ಗೂಂಡಾಗಳ ದೌರ್ಜನ್ಯ

ಕೊಡಗು ಜಿಲ್ಲೆಯಲ್ಲಿ ಕಾರ್ಮಿಕ ಸಂಘಟನೆ ಬಲಿಷ್ಠವಾಗುತ್ತಾ ನಡೆದಿರುವಾಗ ಪೋಲೀಸ್ ಮತ್ತು ಗೂಂಡಾಗಳ ದೌರ್ಜನ್ಯ ದಿನೇ ದಿನೇ ಹೆಚ್ಚುತ್ತಿದೆ. ಈ ಕೆಳಕಂಡ ವರದಿಗಳು ಬಂದಿವೆ.

ಮಾರ್ಚ್ 12ರಂದು ಕುಟ್ಟಾದಲ್ಲಿ ಶ್ರೀಮಂಗಳ ಠಾಣೆಯ ಸಬ್ ಇನ್‌ಸ್ಪೆಕ್ಟರರು ಹೋಟೆಲ್ ಕಾರ್ಮಿಕನನ್ನು ಹೋಟೇಲಿನೊಳಗೆ ಥಳಿಸಿದುದರ ವಿರುದ್ಧ ಅಲ್ಲಿಯ ಜನತೆ ಒಂದು ದಿನದ ಹರತಾಳವನ್ನು ಆಚರಿಸಿತು. ಹರತಾಳದ ಅಂಗವಾಗಿ ಸರ್ವಪಕ್ಷಗಳ ನೇತೃತ್ವದಲ್ಲಿ ಮೆರವಣಿಗೆ ನಡೆಯುತ್ತಿದ್ದಾಗ ಮೆರವಣಿಗೆಕಾರರನ್ನು ಡಿ.ವೈ.ಎಸ್.ಪಿ. ನೇತೃತ್ವದಲ್ಲಿ ಪೋಲೀಸರು ಲಾಠಿ ಪ್ರಹಾರ ಮಾಡಿದ್ದಾರೆ. ಅಲ್ಲದೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರಾದ ಎಂ. ಕೆ. ಬಾಷ, ವಿಜಯನ್ ಎಂಬವರನ್ನು ಬಂಧಿಸಿ ಥಳಿಸಿದ್ದಾರೆ.

ಮಾರ್ಚ್ 14 ರಂದು ಮಡಿಕೇರಿಯಿಂದ 6 ಮೈಲು ದೂರ ಇರುವ ಕ್ಲೋಸ್‌ಬರ್ನ್ ಕಾಫೀ ತೋಟದಲ್ಲಿ ಸಿ.ಐ.ಟಿ.ಯು. ಸಭೆಯನ್ನು ಮುಗಿಸಿ ರಾತ್ರಿ ಹಿಂತಿರುಗುತ್ತಿದ್ದ ಯೂನಿಯನ್ ಕಾರ್ಯಕರ್ತರಾದ ಕಾಂ. ದಿವಾಕರನ್‌ರ ಮೇಲೆ ಮಾಲೀಕರ ಗೂಂಡಾಗಳು ದಾಳಿ ಮಾಡಿದ್ದಾರೆ.

ಮಾರ್ಚ್ 19ರಂದು ಕಾನೂರಿನ ಸಮೀಪದ ಪೈಸಾರಿ ಭೂಮಿಯಲ್ಲಿ ವಾಸಮಾಡುತ್ತಿರುವ ನಿವಾಸಿಗಳ ಸಭೆ ನಡೆಸಿ ವಾಪಸ್ಸಾಗುವಾಗ ಸಿ.ಐ.ಟಿ.ಯು. ಕಾರ್ಯಕರ್ತ ಕಾಂ. ದಿವಾಕರನ್ ಮತ್ತು ಇತರ 15 ಜನರನ್ನು ಸ್ಥಳೀಯ ಸರ್ಕಲ್ ಇನ್‌ಸ್ಪೆಕ್ಟರರು ದಾರಿಯಲ್ಲೇ ಅಮಾನುಷವಾಗಿ ಥಳಿಸಿದ್ದಾರೆ. ನಂತರ ಅವರುಗಳನ್ನು ಶ್ರೀಮಂಗಲ ಠಾಣೆಗೆ ಕರೆದೊಯ್ದು ಮತ್ತೆ ತೀವ್ರವಾಗಿ ಥಳಿಸಿ ಸುಳ್ಳು ಮೊಕದ್ದಮೆ ದಾಖಲು ಮಾಡಿದ್ದಾರೆ. ಇದೂ ಸಾಲದೆಂಬಂತೆ ಸ್ಥಳೀಯ ಕಾಂಗ್ರೆಸ್‌ಗೂಂಡಾಗಳೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ, ಸಿ.ಐ.ಟಿ.ಯು.ವಿನ ಕಾರ್ಯಕರ್ತರಿಗೆ ಬೆದರಿಕೆ ಹಾಕಿದ್ದಾರೆ.

ಮಾರ್ಚ್ 21ರಂದು ಚೆಟ್ಟಳ್ಳಿಯಲ್ಲಿ ಪಕ್ಷದ ಕಾರ್ಯಕರ್ತರು ದಿವಂಗತ ಕಾಂ. ಎ. ಕೆ. ಜಿ. ಯವರ ಚರಮದಿನವನ್ನು ಆಚರಿಸುವ ಸಿದ್ಧತೆಯಲ್ಲಿದ್ದಾಗ ಚೆಟ್ಟಳ್ಳಿ ಪೋಲೀಸರು ಅವರನ್ನು ವಿನಾಕಾರಣ ಬಂಧಿಸಿ ನಂತರ ಬಿಡುಗಡೆ ಮಾಡಿರುವರು.

ಮಾರ್ಚ್ 22ರಂದು ಸಿದ್ದಾಪುರದ ಗ್ರೀನ್‌ಫೀಲ್ಡ್ ಕಾಫೀ ತೋಟದಲ್ಲಿ ದುಡಿಯುವ ಸಂಘದ ಕಾರ್ಯಕರ್ತೆಯೊಬ್ಬಳನ್ನು ಸುಳ್ಳುಕೇಸ್ ದಾಖಲು ಮಾಡಿಸಿ ಒಂದು ದಿನ ಬಂಧನದಲ್ಲಿಟ್ಟಿದ್ದರು. ●

ಮೀಸಲಾತಿ ವಿರೋಧಿ ಚಳುವಳಿಯ ವಿರುದ್ಧ ಜನಾಭಿಪ್ರಾಯ ಮೂಡಿಸಲು ಎಸ್.ಎಫ್.ಐ. ರಾಜ್ಯಸಮಿತಿ ಕರೆ

ಎಸ್.ಎಫ್.ಐ.ನ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸಭೆಯು ಮಾರ್ಚ್ 30ರಂದು ಬೆಂಗಳೂರಿನಲ್ಲಿ ಸಭೆ ಸೇರಿ ಅಂತರಾಷ್ಟ್ರೀಯ, ರಾಷ್ಟ್ರೀಯ ರಾಜಕೀಯ ಚಳುವಳಿಗಳು ಮತ್ತು ಸಂಘಟನಾ ಚಟುವಟಿಕೆಗಳ ಬಗ್ಗೆ ದೀರ್ಘ ಚರ್ಚೆ ನಡೆಸಿತು.

ಸಾಮ್ರಾಜ್ಯಶಾಹಿಯ ಪಿತೂರಿಯ ಖಂಡನೆ

ಎಲ್‌ಸಾಲ್ವಡಾರೋದಲ್ಲಿ ಜನತೆಯ ಮೇಲೆ ಅಮಾನುಷ ದಬ್ಬಾಳಿಕೆ ನಡೆಸುತ್ತಿರುವ ಮಿಲಿಟರಿ ಸರಕಾರವನ್ನು ಮತ್ತು ಮಿಲಿಟರಿ ಆಡಳಿತಕ್ಕೆ ಕುಮ್ಮಕ್ಕು ಕೊಡುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಪಿತೂರಿಯನ್ನು ಖಂಡಿಸಿ ಎಲ್‌ಸಾಲ್ವಡಾರೋದ ಜನತಾಚಳುವಳಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಲಾಯಿತು.

ಎಲ್ಲ ವಿರೋಧಿ ರಾಜಕೀಯ ಪಕ್ಷಗಳನ್ನು ವಿಸರ್ಜಿಸುತ್ತ, ವಿಶ್ವವಿದ್ಯಾನಿಲಯಗಳನ್ನು ಮುಚ್ಚುವ ಮತ್ತು ಸಂವಿಧಾನದ ಪ್ರಜಾಪ್ರಭುತ್ವ ಲಕ್ಷಣಗಳನ್ನು ನಿರ್ನಾಮಗೊಳಿಸುತ್ತಿರುವ ಪಾಕಿಸ್ತಾನದ ಜಿಯಾ ಉಲ್ ಹಕ್‌ರ ಕ್ರಮಗಳನ್ನು ಖಂಡಿಸಿ ಪಾಕಿಸ್ತಾನದ ಮಿಲಿಟರಿ ಕೂಟಕ್ಕೆ ಅಮೇರಿಕನ್ ಸಾಮ್ರಾಜ್ಯಶಾಹಿಯು ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಿರುವುದರ ಬಗ್ಗೆ ಕಳವಳ ವ್ಯಕ್ತಗೊಳಿಸಲಾಯಿತು.

ಪ. ಬಂಗಾಳ ಸರಕಾರದ ಶಿಕ್ಷಣ ನೀತಿಗೆ ಬೆಂಬಲ

ಪ್ರಾಥಮಿಕ ಹಂತದಲ್ಲಿ ಇಂಗ್ಲೀಷ್ ಭಾಷೆಯನ್ನು ತೆಗೆದುಹಾಕುವ, ಮಾತೃ ಭಾಷೆಯ ಬಗ್ಗೆ ಹೆಚ್ಚಿನ ಮಾನ್ಯತೆ ನೀಡುವ ಪ. ಬಂಗಾಳ ಎಡರಂಗ ಸರಕಾರದ ಕ್ರಮವನ್ನು ಸಭೆ ಬೆಂಬಲಿಸಿತು.

ಮೀಸಲಾತಿ ವಿರೋಧಿ ಚಳುವಳಿಯ ಖಂಡನೆ

ಸುಮಾರು 2 ತಿಂಗಳಿಂದ ಗುಜರಾತಿನ ವೈದ್ಯವಿದ್ಯಾರ್ಥಿಗಳು ಮೀಸಲಾತಿ ವಿರುದ್ಧ ನಡೆಸುತ್ತಿರುವ ಚಳುವಳಿಯನ್ನು ಸಭೆ ತೀವ್ರವಾಗಿ ಖಂಡಿಸಿದೆ. ಮೀಸಲಾತಿ ಪರವಾಗಿ ಜನಾಭಿಪ್ರಾಯ ಮೂಡಿಸಲು ಎಸ್.ಎಫ್.ಐ. ಪ್ರಚಾರ ನಡೆಸಬೇಕೆಂದೂ ತೀರ್ಮಾನಿಸಲಾಯಿತು.

ಸಂಘಟನಾ ತೀರ್ಮಾನಗಳು

1. ಜೂನ್ ತಿಂಗಳಿನಲ್ಲಿ ಧಾರವಾಡ, ಮಂಗಳೂರು ಮತ್ತು ಮೈಸೂರಿನಲ್ಲಿ ಶಿಕ್ಷಣ ಪದ್ಧತಿ ಮತ್ತು ಎಸ್.ಎಫ್.ಐ. ಸಂಘಟನೆಯ ಬಗ್ಗೆ ಕಾರ್ಯಕರ್ತರುಗಳಿಗೆ ವಿಶೇಷ ತರಬೇತಿ ನೀಡಲು ಕಾರ್ಯದರ್ಶಿ ಮಂಡಳಿಯು ತೀರ್ಮಾನಿಸಿದೆ.

2. ಎಲ್ಲ ಶಾಖೆಗಳು ಸದಸ್ಯತ್ವದ ಅಂತಿಮ ವರದಿಯನ್ನು ಏಪ್ರಿಲ್ 10 ರೊಳಗೆ ರಾಜ್ಯಸಮಿತಿಗೆ ಸಲ್ಲಿಸಬೇಕೆಂದೂ, ರಾಜ್ಯಸಮಿತಿ ನಿಧಿಯ ಹಣವನ್ನು ಏಪ್ರಿಲ್ 20ರೊಳಗೆ ಕಳುಹಿಸಬೇಕೆಂದೂ ಕಾರ್ಯದರ್ಶಿ ಮಂಡಳಿಯು ಎಲ್ಲ ಶಾಖೆಗಳಿಗೆ ತಿಳಿಸಿದೆ. ಅಧ್ಯಯನ ಸಮಿತಿ ಸದಸ್ಯರುಗಳು ಮೇ ತಿಂಗಳ ಅಂತ್ಯದೊಳಗೆ ವರದಿಗಳನ್ನು ಕಳುಹಿಸಿಕೊಡಬೇಕೆಂದು ತಿಳಿಸಿದೆ.

o

ಅಂಗವಿಕಲರ ಸಮ್ಮೇಳನ

ಏಪ್ರಿಲ್ 11 ಮತ್ತು 12ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಮಟ್ಟದ ಅಂಗವಿಕಲರ ದ್ವಿತೀಯ ಸಮ್ಮೇಳನವು ಖ್ಯಾತ ಸಾಹಿತಿ ಶ್ರೀ ನಿರಂಜನರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಅಂತರಾಷ್ಟ್ರೀಯ ಅಂಗವಿಕಲ ವರ್ಷದಲ್ಲಿನಡೆಯಲಿರುವ ಈ ಬಾರಿಯ ಸಮ್ಮೇಳನವು ರಾಜ್ಯದ ಅಂಗವಿಕಲರ ಸಂಘಟನೆಯ ದೃಷ್ಟಿಯಲ್ಲಿ ಮಹತ್ವಪೂರ್ಣ ಸಮ್ಮೇಳನವಾಗಲಿದೆ.

ಈ ಸಮ್ಮೇಳನವನ್ನು ಕನ್ನಡಪ್ರಭ ಪತ್ರಿಕೆಯ ಸಂಪಾದಕ ಶ್ರೀ ಖಾದ್ರಿ ಶಾಮಣ್ಣ ಉದ್ಘಾಟಿಸಲಿರುವರು. ಸುಮಾರು 2000ಮಂದಿ ಅಂಗವಿಕಲರ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಸಮ್ಮೇಳನದಲ್ಲಿ ರಾಜ್ಯದ ಎಲ್ಲೆಡೆಗಳಿಂದ ಅಂಗವಿಕಲರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘದ ಸಂಘಟನಾ ಕಾರ್ಯದರ್ಶಿ ಶ್ರೀ ಬಾ. ಸಾಮಗ ಮಲ್ಪೆ ವಿನಂತಿಸಿಕೊಂಡಿದ್ದಾರೆ. ●

ಕಾಂ. ವಿ. ನಾಗಪ್ಪನವರ ನಿಧನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ.ಕ. ಜಿಲ್ಲೆಯ ಕುಂದಾಪುರ ಟೌನ್ ಶಾಖೆಯ ಸದಸ್ಯರಾದ ಕಾಂ. ವಿ. ನಾಗಪ್ಪನವರು ತಾರೀಕು 21-3-1981ರಂದು ಆಕಸ್ಮಿಕವಾಗಿ ನಿಧನರಾದರು. ಆಟೋರಿಕ್ಷಾ ಚಾಲಕರನ್ನು ಸಂಘಟಿಸಿ, ಸಂಘದ ಕಾರ್ಯದರ್ಶಿಯಾಗಿ ಸಕ್ರಿಯ ಪಾತ್ರವಹಿಸಿದ್ದರು.

ಕಾಂ. ವಿ. ನಾಗಪ್ಪನವರ ನಿಧನಕ್ಕೆ ಸಿ.ಪಿ.ಐ.(ಎಂ)ನ ಕುಂದಾಪುರ ತಾಲ್ಲೂಕು ಸಮಿತಿ ಮತ್ತು ಕುಂದಾಪುರ ತಾಲ್ಲೂಕು ಕೆಲಸಗಾರರ ಸಂಘದ ಪರವಾಗಿ ಕಾಂ. ಅಬ್ರಹಾಂ ಕರ್ಕಡ ಹಾಗೂ ಕಾಂ. ಶಂಕರ್‌ರವರು ಸಂತಾಪವ್ಯಕ್ತಪಡಿಸಿರುತ್ತಾರೆ. ●

ಶಿವಮೊಗ್ಗ ನಗರ ಸಮಿತಿ ಸಭೆ

ತಾ. 22-3-81ನೇ ಭಾನುವಾರ ಪಕ್ಷದ ಸರ್ವಸದಸ್ಯರ ಸಭೆಯು ಕಾಂ. ತಿರುಕಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಂಡಿತು.

ದಿನೇದಿನೇ ಬೆಲೆಗಳನ್ನು ಏರಿಸಿ ಜನರನ್ನು ಸಂಕಷ್ಟಕ್ಕೀಡುಮಾಡುತ್ತಿರುವ ಬಂಡವಾಳಶಾಹಿ ಕಾಂಗ್ರೆಸ್ ಸರ್ಕಾರವನ್ನು ಖಂಡಿಸಿತು.

ಕಾಂಗ್ರೆಸ್(ಯು)ಆಫೀಸಿನ ಮೇಲೆ ದಾಳಿ, ರೈತ-ಕಾರ್ಮಿಕರ ಮೇಲೆ ನಡೆಯುತ್ತಿರುವ ಪೋಲೀಸ್ ದಬ್ಬಾಳಿಕೆ, ಸಿ.ಐ.ಟಿ.ಯು. ಕಾರ್ಯಕರ್ತರ ಮೇಲೆ ಇಂಟಕ್ ನಡೆಸುತ್ತಿರುವ ದೌರ್ಜನ್ಯಗಳನ್ನು ಗೂಂಡಾ ವರ್ತನೆಯನ್ನು ವಿರೋಧಿಸಲು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಂದುಗೂಡಿ ಹೋರಾಡಬೇಕೆಂದು ವಿನಂತಿಸಿತು. ಎಲ್.ಐ.ಸಿ. ನೌಕರರ ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತು.

REG. KRNB-368 MAG (2) PRB DECR 319/78-79 ಏಪ್ರಿಲ್ 5, 1981

ಭೋರ್ಗರೆದ ಜನಸಾಗರ

(1ನೇ ಪುಟದಿಂದ)

ಕಳೆದ ಕೆಲವು ತಿಂಗಳಿಂದ ದೇಶದ ನಾನಾ ಭಾಗಗಳಲ್ಲಿ ನ್ಯಾಯಕ್ಕಾಗಿ ರೈತರು ಸಂಘಟಿತರಾಗಿದ್ದಾರೆ. ತಮ್ಮ ಹೋರಾಟದ ಅಂಗವಾಗಿಯೇ ಈ ಮಹಾನ್ ರ್‍ಯಾಲಿಯ ಏರ್ಪಾಡಿಗೆ ಕಾರಣರಾಗಿದ್ದಾರೆ. ತಮಗಾದ ಅನ್ಯಾಯದ ವಿರುದ್ಧ ಧ್ವನಿ ಎತ್ತಿದ್ದಾರೆ. ಈ ಧ್ವನಿ ರೇಡಿಯೋಗಳಲ್ಲಿ ಬಿತ್ತರಿಸದಿರಬಹುದು. ಆದರೆ ಲಕ್ಷಲಕ್ಷ ದುಡಿಯುವ ಜನರ ಹೃದಯ ತರಂಗಗಳ ಮೂಲಕ ದೇಶದ ಮೂಲೆ ಮೂಲೆಗೆ ತಲಪುವುದು ಖಂಡಿತ.

ಈ ರ್‍ಯಾಲಿಯಲ್ಲಿ ಕಾರ್ಮಿಕರ ಪಾತ್ರವಂತೂ ಅವಿಸ್ಮರಣೀಯ. ನ್ಯಾಯಕ್ಕಾಗಿ ಎದ್ದು ನಿಂತಿರುವ ತಮ್ಮ ರೈತ ಬಾಂಧವರಿಗೆ ಕೈಲಾದ ಸಹಾಯ ನೀಡಿದರು. ರ್‍ಯಾಲಿ ಯಶಸ್ವಿಯಾಗಲು ಶ್ರಮಿಸಿದರು.

ಬೋಟ್‌ಕ್ಲಬ್‌ನಲ್ಲಿ ನಡೆದಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂಗ್ರೆಸ್ (ಯು) ನಾಯಕ ಶರದ್‌ಪವಾರ ವಹಿಸಿದ್ದರು. ಈ ಸಭೆಗೆ ಮೊದಲು ರೈತರ–ಕೃಷಿಕೂಲಿಕಾರರ ಬೇಡಿಕೆಗಳ ಅಂಶಗಳನ್ನೊಳಗೊಂಡ ಪತ್ರವನ್ನು ಲೋಕಸಭಾಧ್ಯಕ್ಷ ಶ್ರೀ ಬಲರಾಂ ಜಕರ್ ಅವರಿಗೆ ಅರ್ಪಿಸಲಾಗಿತ್ತು. ಸಭೆಯನ್ನು ಉದ್ದೇಶಿಸಿ ಹರಿಯಾಣ ಮಾಜೀ ಮುಖ್ಯಮಂತ್ರಿ ದೇವಿಲಾಲ್, ಪಂಜಾಬ್ ಮಾಜೀ ಮುಖ್ಯಮಂತ್ರಿ ಪ್ರಕಾಶ್‌ಸಿಂಗ ಬಾದಲ್, ಚಂದ್ರಜಿತ್ ಯಾದವ್, ಸಿ.ಪಿ.ಐ.(ಎಂ)ನ ಕಾಂ. ಹರೇಕಿಶನ್‌ಸಿಂಗ್ ಸುರ್ಜೀತ್, ಸಿ.ಪಿ.ಐ. ಪರವಾಗಿ ಕಾಂ. ಝಡ್. ಎ. ಅಹಮದ್, ಸಿ.ಐ.ಟಿ.ಯು. ಪರವಾಗಿ ಕಾಂ. ರಣದಿವೆ, ಎ.ಐ.ಟಿ.ಯು.ಸಿ. ಪರವಾಗಿ ಕಾಂ. ಇಂದ್ರಜಿತ್‌ಗುಪ್ತಾ ಮೊದಲಾದವರು ಮಾತನಾಡಿ ಕಾಂಗ್ರೈ ನೇತೃತ್ವದ ಸರಕಾರಗಳ ಜನವಿರೋಧಿ ನೀತಿಗಳನ್ನು ಉಗ್ರವಾಗಿ ಖಂಡಿಸಿದರು. ರೈತರ-ರೈತಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದಿದ್ದರೆ ರಾಷ್ಟ್ರದಾದ್ಯಂತ ಜೈಲ್–ಭರೋ ಕಾರ್ಯಕ್ರಮ ಹಮ್ಮಿಕೊಳ್ಳಬೇಕಾದೀತೆಂದೂ, ದುಡಿಯುವ ಜನರ ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳಲು ಯತ್ನಿಸಿದರೆ ಉಗ್ರ ಪರಿಣಾಮ ಎದುರಿಸಬೇಕಾದೀತೆಂದು ಇಂದಿರಾಗಾಂಧಿಯವರಿಗೆ ನೇರ ಎಚ್ಚರಿಕೆ ನೀಡಲಾಯಿತು.

ಸಂಘಟಕರ, ಅಂದಾಜನ್ನು ಮೀರಿ ರ್‍ಯಾಲಿ ಅದ್ಭುತ ಯಶಸ್ಸುಪಡೆಯಿತು.

●

ಎಲ್. ಐ. ಸಿ. ನೌಕರರ ಮುಷ್ಕರ

(1ನೇ ಪುಟದಿಂದ)


ಧಿಕ್ಕರಿಸುವುದರಲ್ಲಿ ಸರಕಾರವು ಯಶಸ್ವಿಯಾದರೆ ಕಾರ್ಮಿಕ ವರ್ಗವು ಗಳಿಸಿದ ಪ್ರತಿಯೊಂದು ಹಕ್ಕುಗಳೂ ಸವಲತ್ತುಗಳೂ ನಾಶವಾಗುವ ಪರಿಸ್ಥಿತಿ ಬರಬಹುದು. ಆದ್ದರಿಂದಲೇ ದೇಶದ ಕಾರ್ಮಿಕ ವರ್ಗವು ಈ ಸವಾಲನ್ನು ಸ್ವೀಕರಿಸಿ ಎಲ್.ಐ.ಸಿ. ನೌಕರರ ಹೋರಾಟವನ್ನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಿದೆ.

ಏಪ್ರಿಲ್ 3ರಂದು ಬೆಂಗಳೂರಿನಲ್ಲಿ ಜರಗಿದ ಸಿ.ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿಯ ಪದಾಧಿಕಾರಿಗಳ ಸಭೆಯು ಎಲ್. ಐ. ಸಿ. ನೌಕರರ ಹೋರಾಟಕ್ಕೆ ಹಾರ್ದಿಕ ಬೆಂಬಲವನ್ನು ಸಾರಿದೆ.

ದಿನಾಂಕ 27-3-81ರಂದು ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಎಲ್.ಐ.ಸಿ. ನೌಕರರ ಸಂಯುಕ್ತ ಸಭೆಯನ್ನುದ್ದೇಶಿಸಿ ಎ. ಐ. ಐ. ಇ. ಎ.ನ ಜಾಯಿಂಟ್ ಸೆಕ್ರೆಟರಿಯಾದ ಕಾಂ. ಸುನಿಲ್ ಮೊಯಿತ್ರ (ಎಂ.ಪಿ.) ಮಾತನಾಡುತ್ತಾ ಮುಷ್ಕರ ಮುರಿಯುವ ತಂತ್ರ ಅನುಸರಿಸುತ್ತಿರುವ ಎಲ್.ಐ.ಸಿ ಆಡಳಿತ ವರ್ಗ ಮತ್ತು ಕೇಂದ್ರ ಸರಕಾರಕ್ಕೆ ತೀವ್ರ ಎಚ್ಚರಿಕೆ ನೀಡಿದರು.

○

ಗೂಂಡಾಗಿರಿಯ ಇನ್ನೊಂದು ನಿದರ್ಶನ!



ಮಿನರ್ವ ಟೆಕ್ಸ್‌ಟೈಲ್ ಮಿಲ್ ಬೆಂಗಳೂರಿನ ಹಳೆಯ ಕಾರ್ಖಾನೆಗಳಲ್ಲೊಂದು. ಕಳೆದ 6 ತಿಂಗಳಿಂದ ಈ ಕಾರ್ಖಾನೆಯ ಸುಮಾರು 3000 ಕಾರ್ಮಿಕರು ಸಿ.ಐ.ಟಿ.ಯು. ಸಂಘಟನೆಯಡಿಯಲ್ಲಿ ಬಂದಿದ್ದಾರೆ. ಕಾರ್ಖಾನೆಯಲ್ಲಿ ಇನ್ನೊಂದು ಚಮಚಾ ಯೂನಿಯನ್ ಇದೆ. ಕಾರ್ಮಿಕರಿಂದ ತುಚ್ಛೀಕರಿಸಲ್ಪಟ್ಟ ಭ್ರಷ್ಟರು ಈ ಸಂಘದ ನೇತಾಗಳು.

ಮಿನರ್ವ ಮಿಲ್ ಹತ್ತಿ ಗಿರಣಿ ಕಾರ್ಮಿಕರ ಸಂಘ (ಸಿ.ಐ.ಟಿ.ಯು.) ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಯಕಲಾಪ ನಡೆಸುತ್ತಾ ಆದರಣೀಯವಾಗಿರುವುದನ್ನು ಸಹಿಸದ ಕಾರ್ಮಿಕ ವಿರೋಧಿಗಳು ಮಿನರ್ವ ಮಿಲ್ ಹತ್ತಿಗಿರಣಿ ಕಾರ್ಮಿಕರ ಸಂಘದ ಖಜಾಂಚಿಯಾದ ಕಾಂ. ಎ. ಮಣಿಯವರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿದ್ದಾರೆ. ಸುಮಾರು 8½ ಅಂಗುಲ ಉದ್ದ ಮತ್ತು 4 ಅಂಗುಲ ಆಳವಾಗಿರುವ ಈ ಗಾಯದಿಂದ ಕಾಂ. ಮಣಿ ಬದುಕಿದ್ದೇ ಹೆಚ್ಚು. ವಿಪರೀತ ರಕ್ತಸ್ರಾವದಿಂದ ಕುಸಿದು ಬಿದ್ದಾಗ ಜೊತೆ ಕೆಲಸಗಾರರು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಇದು ನಡೆದದ್ದು 27–3–1981ರ ಮಧ್ಯಾಹ್ನ 3 ಘಂಟೆಯ ಸಮಯಕ್ಕೆ.

ಸುಭದ್ರ (?) ಸರಕಾರದ ಕೃಪಾಛತ್ರದಲ್ಲಿ ಕೊಬ್ಬಿಹೋಗಿರುವ ಸಮಾಜಘಾತಕ ಪಡೆ ಈ ಘಟನೆಗೆ ಕಾರಣ.

ನಮ್ಮ ವರದಿಗಾರ ಆಸ್ಪತ್ರೆಯಲ್ಲಿರುವ ಕಾಂ. ಮಣಿಯವರನ್ನು ಕಂಡು ಮಾತನಾಡಿಸಿದಾಗ ಮುಖದಲ್ಲಿ ಬಳಲಿಕೆ ಕಂಡರೂ, ಸಾವಿನ ಬಾಯಿಂಗೆ ನುಗ್ಗಿ ಹೊರಬಂದಿರುವ ಈ ತರುಣ ಕಾರ್ಯಕರ್ತ ಬೆಳೆಯುತ್ತಿರುವ ಗೂಂಡಾ ಕೃತ್ಯಗಳಿಗೆ ಆತಂಕ ವ್ಯಕ್ತಪಡಿಸಿದ. "ಚಾಕು-ಚೂರಿಯಿಂದ ನಮ್ಮ ಸಂಘಟನೆ ಹಾಳು ಮಾಡುವದು ಸಾಧ್ಯವೆಂದು ತಿಳಿದಿದ್ದರೆ ಅವರು ಮೂರ್ಖರಷ್ಟೇ" ಎಂದನು.

ಆಸ್ಪತ್ರೆಯಿಂದ ವಾಪಸು ಬರುವಾಗ ಬಳಲಿಕೆ ಆ ಯುವಕನ ಮುಖದಲ್ಲಿ ಹೋರಾಟದ ಛಲದ ಲಕ್ಷಣ ಹೆಚ್ಚಾಗಿರುವದು ಕಂಡುಬಂದಿತು.

ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಸನ್ನಾಹ

1980 ಜನವರಿಯಿಂದ ಶ್ರೀಮತಿ ಗಾಂಧೀ ನೇತೃತ್ವದ ಕಾಂಗ್ರೈ ಕೇಂದ್ರದಲ್ಲಿ ಆಡಳಿತಕ್ಕೆ ಬಂದಿತು. ಚುನಾವಣಾ ಸಮಯದಲ್ಲಿ ಜನತೆಯ ಹತ್ತಿರ ಮತಕೇಳಲು ಹೋದಾಗ ಶ್ರೀಮತಿ ಗಾಂಧಿ ಮತ ಯಾಚಿಸಿದ್ದು "ಸುಭದ್ರ ಮತ್ತು ಕಾರ್ಯತತ್ಪರ ಸರಕಾರಕ್ಕಾಗಿ" ಎಂದು.

ಇಲ್ಲಿಯವರೆಗಿನ ಆಡಳಿತ ತೋರಿಸಿಕೊಟ್ಟಿದ್ದೇನೆಂದರೆ ಸುಭದ್ರವೂ ಇಲ್ಲ, ಕಾರ್ಯತತ್ಪರತೆಯೂ ಇಲ್ಲ. ಅಧಿಕಾರ ದಾಹದಿಂದ ಕಚ್ಚಾಡುವ ರಣಹದ್ದುಗಳು ನಮ್ಮನ್ನು ಆಳುತ್ತಿರುವುದು. ಕೆಲವೇ ಸಮಾಜದ್ರೋಹಿ ಗೂಂಡಾಗಳು ಸರಕಾರಿ ಯಂತ್ರವನ್ನೇ ಕಮ್ಮುಲ್ಲಿ ಹಿಡಿದುಕೊಂಡಿವೆ.

ಯುವಕ, ಉತ್ಸಾಹೀ ಮುಖ್ಯಮಂತ್ರಿ ಗುಂಡೂರಾಯರು ಅಧಿಕಾರಕ್ಕೆ ಬಂದಾಗಿನಿಂದ ನಡೆದ ಘಟನೆಗಳ ಬಗ್ಗೆ ಬರೆಯುವುದೆಂದರೆ ಒಂದು ಪುರಾಣವನ್ನೇ ಬರೆಯಬಹುದು. ಈ ಮಹಾರಾಯ ಜನರನ್ನು ನೆಮ್ಮದಿಯಿಂದ ಉಸಿರುಬಿಡಲೂ ಬಿಡುತ್ತಿಲ್ಲ.

ರಾಜ್ಯದ ದುಡಿಯುವ ಜನತೆ ಸಂಘಟಿತವಾಗುತ್ತಿದೆ. ತನ್ನ ಸಂಘಟನೆಯ ಬಲದಿಂದ ಹಕ್ಕುಗಳನ್ನು ಕೇಳಹತ್ತಿದೆ.

ಬೆಂಗಳೂರು ನಗರವೂ ಇತ್ತೀಚಿನ ವರ್ಷಗಳಲ್ಲಿ ಕೆಲವು ಮಹಾನ್ ಕಾರ್ಮಿಕಹೋರಾಟಗಳನ್ನು ಕಂಡಿತು. ಹೋರಾಟಗಳನ್ನು ಸುವ್ಯವಸ್ಥಿತವಾಗಿ ನದೆಬಡೆಯುವ ಕೆಲಸವೂ ಸರಕಾರದಿಂದ ನಡೆಯಿತು. ಮೂಲಭೂತ ಹಕ್ಕುಗಳಿಗೇ ರಾಯರ ಆಡಳಿತದಲ್ಲಿ ರಕ್ಷಣೆಯಿಲ್ಲ. ಸಭೆ–ಮೆರವಣಿಗೆ-ಪ್ರತಿಭಟನೆ-ಪ್ರದರ್ಶನ ನಡೆಸಲು ಅವಕಾಶವಿಲ್ಲ. ರಾಯರ ಮನೋಧರ್ಮಕ್ಕೆ ಸರಿಯಾಗಿ ಬೆಂಗಳೂರು ಪೋಲೀಸ್ ಕಮೀಷನರು ವರ್ತಿಸುತ್ತಿದ್ದಾರೆ. ಪೋಲೀಸ್ ಕಾಯ್ದೆಯ ಸೆ. 35ರ ಪ್ರಕಾರ ಜನತೆಯ ಬಾಯಿಗೆ ಬೀಗ ಹಾಕಲಾಗಿದೆ.

ಗೂಂಡಾಗಳ ಸುಸಜ್ಜಿತ ಪಡೆ ಪ್ರಜಾಪ್ರಭುತ್ವ ಶಕ್ತಿಗಳಿಗೆ ವ್ಯವಸ್ಥಿತವಾಗಿ ತಡೆಯೊಡ್ಡುತ್ತಿದ್ದಾರೆ. ಈ ಗೂಂಡಾಗಳಿಗೆ ಪೋಲೀಸ ಕಮೀಷನರರ ಕುಮ್ಮಕ್ಕು! ಈ ಪಡೆಯ ಮಹಾನ್ ಕಾರ್ಯಕ್ಕೆ ಪರೋಕ್ಷ ಆಶೀರ್ವಾದ.

ಇಂಥ ಗಂಭೀರ ಸಮಯದಲ್ಲಿ ತಮ್ಮ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಜನತೆ ತಾವೇ ಮಾಡಿಕೊಳ್ಳಬೇಕಾದ ಅಗತ್ಯವೊದಗಿದೆ. ಈ ದಿಶೆಯಲ್ಲಿ ಪ್ರಯತ್ನಗಳು ಪ್ರಾರಂಭವಾಗಿವೆ. ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗಾಗಿ ಕಾತುರವಾಗಿರುವ ರಾಜಕೀಯ ಪಕ್ಷಗಳು ಮತ್ತು ಅವುಗಳ ನೇತೃತ್ವದ ಸಾಮೂಹಿಕ ಸಂಘಟನೆಗಳು ಈ ಪ್ರಯತ್ನದಲ್ಲಿ ತೊಡಗಿವೆ.

ಸಿ.ಐ.ಟಿ.ಯು.ವಿನಿಂದ ಕಾಂ. ವಿ.ಜೆ.ಕೆ. ನಾಯರ್, ಎ.ಐ.ಟಿ.ಯು.ಸಿ.ಯ ಕಾಂ. ಬಾಬೂಮ್ಯಾಥ್ಯೂ ಮತ್ತು ಎಚ್‌ಎಂ.ಎಸ್.ನ ಕಾಂ. ಪುಟ್ಟಯ್ಯ ಇವರುಗಳ ನೇತೃತ್ವದಲ್ಲಿ ನಡೆಯಲಾದ ಪತ್ರಿಕಾಗೋಷ್ಠಿ ಈ ವಿವರಗಳನ್ನು ತಿಳಿಸಿದರು.

ದಿನಾಂಕ 12-4-81ರಂದು ನಡೆಯಲಿರುವ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣಾ ಸಮಿತಿಯ ಸಮಾವೇಶದಲ್ಲಿ ಮುಂದಿನ ಕಾರ್ಯಕ್ರಮಗಳು ರೂಪಗೊಳ್ಳಲಿವೆ.

ಕಾರ್ಮಿಕರಲ್ಲಿ ಮನವಿ

ಕುದುರೆ ಮುಖದ ಕಾರ್ಮಿಕರ ಹೋರಾಟ ಪ್ರಾರಂಭವಾಗಿ ಆರು ತಿಂಗಳಾಗಿದೆ. ಈಗಾಗಲೇ ರಿಟ್ರೆಂಚಮೆಂಟ ಆಗಿರುವ ಕಾರ್ಮಿಕರಲ್ಲದೇ ಇನ್ನೂ 175 ಕಾರ್ಮಿಕರನ್ನು 27-2-81 ರಂದು ರಿಟ್ರೆಂಚಮೆಂಟ್ ಮಾಡಲಾಗಿದೆ. ಸೂಪಾ ಘಟಕದಲ್ಲಿ ಚಳುವಳಿ ಪ್ರಾರಂಭಿಸಿದ್ದ 50 ಸಂಗಾತಿಗಳನ್ನು ಬಂಧಿಸಿದ್ದಾರೆ.

ಹೋರಾಟದಲ್ಲಿ ಕಾರ್ಮಿಕರಿಗೆ ಹಣ ಕಾಸಿನ ತೊಂದರೆ ತುಂಬಾ ಇದೆ. ಕಾರಣ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಹಣ ಸಹಾಯ ಮಾಡಬೇಕೆಂದು ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ನಂಜುಂಡಪ್ಪ ವಿನಂತಿಸಿದ್ದಾರೆ.

ಟಿ. ತಿಪ್ಪೇಶ್
ಪ್ರಧಾನ ಕಾರ್ಯದರ್ಶಿ
ಎಚ್. ಎಸ್. ಸಿ. ಎಲ್. ಎಂಪ್ಲಾಯೀಸ್ ಅಸೋಸಿಯೇಶನ್ (ಸಿ.ಐ.ಟಿ.ಯು.) ಕುದುರೆಮುಖ ಪೋಸ್ಟ್
ಚಿಕ್ಕಮಂಗಳೂರು ಜಿಲ್ಲೆ.

ಸಿ.ಐ.ಟಿ.ಯು. ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಸಭೆ

ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1. ರೈತಕಾರ್ಮಿಕ ಹೋರಾಟ ಸಮಿತಿಯ ಪರವಾಗಿ ಏಪ್ರಿಲ್ 20 ರಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿರುವ ಧರಣಿ-ಸತ್ಯಾಗ್ರಹ ಮೊದಲಾದ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸಿ.ಐ.ಟಿ.ಯು. ಸದಸ್ಯರು ಪಾಲ್ಗೊಳ್ಳುವಂತೆ ಮಾಡುವದು.

2. ಮಂಗಳೂರಿನಲ್ಲಿ ಎ.ಐ.ಟಿ.ಯು.ಸಿ.ಯ ಜೊತೆಗೂಡಿ ಈ ಬಾರಿಯ ಮೇ ದಿನಾಚರಣೆ ಆಚರಿಸುವದು. ಉಡುಪಿಯಲ್ಲಿ ಎ.ಐ.ಟಿ.ಯು.ಸಿ. ಪಾಲ್ಗೊಳ್ಳುವಂತೆ ಪ್ರಯತ್ನಿಸುವದು.

3. ಆರು ತಿಂಗಳಿಂದ ಹೋರಾಟ ಮಾಡುತ್ತಿರುವ ಎಚ್.ಎಸ್.ಸಿ.ಎಲ್. ಕಾರ್ಮಿಕರಿಗೆ ಹಣ ಕಾಸಿನ ಸಹಾಯ ಮಾಡಬೇಕೆಂದೂ ತೀರ್ಮಾನಿಸಿತಲ್ಲದೇ ಇದರ ಅಂಗವಾಗಿ ಸೌತ್‌ಕೆನರಾ ಟೈಲ್ ವರ್ಕರ್ಸ್ ಪರವಾಗಿ ಎಚ್. ಎಸ್. ಸಿ. ಎಲ್. ಕಾರ್ಮಿಕರಿಗೆ 501 ರೂ.ಗಳನ್ನು ಕಳಿಸಿಕೊಡಲಾಯಿತು.

4. ಮೈಕೋ ಕಾರ್ಖಾನೆಯಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಸಂಘ ಕಾರ್ಯ ನಿರ್ವಹಿಸದಂತೆ ಅಡೆತಡೆ ಮಾಡುತ್ತಿರುವ ಇಂಟಕ್ ಗೂಂಡಾಗಿರಿಯನ್ನು ಉಗ್ರವಾಗಿ ಖಂಡಿಸಲಾಯಿತು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT